A

# “ಜನಪದ ಸಾಹಿತ್ಯದಲ್ಲಿ ಜನಪದ ಕಥೆಗಳ ಕುರಿತು ಅಧ್ಯಯನ”

***Submitted to the***

**H.K.E. Society’s**

## A. V. PATIL ARTS, SCIENCE & COMMERCE COLLEGE ALAND"

## Submitted By


1. Mahesh Prakash
2. Satish Vithal
3. Shambhuling Maruti
4. Shivaraj Parameshwar
5. Sanjukumar Vithal


***Under the guidance of***


# Prof. B.S Kage

Assistant Professor


**Department of Kannada**
**A V Patil Arts, Science & Commerce College Aland"**
**2021-22**

H.K.E. SOCIETY'S
A. V. PATIL ARTS, SCIENCE & COMMERCE COLLEGE
ALAND

## CERTIFICATE OF COMPLETION

This is to certify that the Project Report on "ಜನಪದ ಸಾಹಿತ್ಯದಲ್ಲಿ ಜನಪದ ಕಥೆಗಳ ಕುರಿತ ಅಧ್ಯಯನ" AT HKES'S A. V. PATIL ARTS, SCIENCE & COMMERCE COLLEGE, ALAND " is based on the project carried out under the guidance of Prof. B.S Kage and submitted to the Department of Kannada H.K.E. Society's A V Patil Arts, Science & Commerce College Aland.

**SUBMITTED BY :**

1. Dasharath Shivanand
2. Guruputra Baburao Maradi
3. Madhu Arjun
4. Laxmikant Vishwanath
5. Lingaraj Gajanand

**GUIDE** **HOD** **PRINCIPAL**

ಮುಖ್ಯಸ್ಥರು
ಕನ್ನಡ ವಿಭಾಗ
ಹೈ.ಕ.ಶಿ. ಸಂಸ್ಥೆಯ, ಎ.ವ್ಹಿ. ಪಾಟೀಲ
ಮಹಾವಿದ್ಯಾಲಯ, ಆಳಂದ

PRINCIPAL
H.K.E. Society's
A.V. Patil Degree College
ALAND-585 302, Dist. Kalabu

**DATE:**

**PLACE : ALAND**

# ACKNOWLEDGEMENTS

It is my pleasure to express my sincere gratitude to all those who have given guidance and support in completion of this dissertation report. I wish to express my sincere thanks to Prof. B.S Kage Assistant Professor and Head of Department of Kannada for his encouragement which helped in accomplishment of this study.

I wish to express my sincere heartfelt gratitude to Prof. B. S Kage Assistant Professor and department of Kannada for the constant guidance and support in all areas. Without her guidance the outcome of this report would not have been so successful.

# ಪರಿವಿಡಿ

ಪ್ರಮಾಣ ಪತ್ರ

ಘೋಷಣಾ ಪತ್ರ

ಅರಿಕೆ

ಪೀಠಿಕೆ

1. ಅಧ್ಯಯನದ ಗುರಿ ಮತ್ತು ಉದ್ದೇಶಗಳು
2. ಜಾನಪದ ಕಥೆಗಳ ಅರ್ಥ
3. ಜಾನಪದ ಕಥೆಗಳ ಸ್ವರೂಪ
4. ಜಾನಪದ ಕಥೆಗಳ ಲಕ್ಷಣಗಳು
5. ಜಾನಪದ ಕಥೆಗಳ ವಿಧಗಳು
6. ಜಾನಪದಗಳ ವರ್ಗೀಕರಣ
7. ಜಾನಪದ ಕಥೆಗಳ ಆರಂಬದ ಕೆಲವು ಸೂತ್ರಗಳು
8. ಜಾನಪದ ಕಥೆಗಳ ಮುಕ್ತಾಯ
9. ಉಪಸಂಹಾರ

   ಆಕರ ಗ್ರಂಥಗಳು

**ಪೀಠಿಕೆ:-**

ತಲೆಮಾರಿನಿಂದ ತಲೆಮಾರಿಗೆ ರೂಪಾಂತರಗೊಂಡೋ ಹಾಗೆಯೋ ಬರೆವಣಿಗೆಯ ಮೂಲಕವೊ ಬಾಯ ಮೂಲಕವೋ ನಿರಂತರವಾಗಿ ಸಾಗಿ ಬಂದಿರುವ ಕಥೆ. ಈ ಮಾತು ವ್ಯಾಪಕವಾದ ಅರ್ಥದಲ್ಲಿ ಎಲ್ಲ ಸಾಂಪ್ರದಾಯಿಕ ಕಥನರೂಪಗಳನ್ನೂ ಒಳಗೊಳ್ಳುತ್ತದೆ. ಜನಪದ ಕಥೆಗಳು ಕನ್ನಡದಲ್ಲಿ ಅಜ್ಜಿಯ ಕಥೆಗಳು (ನೋಡಿ- ಅಜ್ಜಿಕಥೆ) ಎಂಬುದಾಗಿ ಪ್ರಸಿದ್ಧಿ ಪಡೆದಿವೆ. ಅಸ್ಸಾಮೀ ಮತ್ತು ಬಂಗಾಳೀ ಭಾಷೆಗಳಲ್ಲಿ ಇವನ್ನು ಸಾಧುಕಥಾ ಎಂದು ಕರೆಯುತ್ತಾರೆ. ಇದಕ್ಕೆ ಅಲ್ಲಿ ವರ್ತಕ ಪ್ರಧಾನ ಪಾತ್ರ ವಹಿಸುವುದೇ ಕಾರಣವಾಗಿದೆ.

**ಅಧ್ಯಯನದ ಗುರಿ ಮತ್ತು ಉದ್ದೇಶ:-**

ಕಥೆಗಳನ್ನು ಹೇಳುವುದಾಗಲಿ ಕೇಳುವುದಾಗಲಿ ನಿನ್ನೆಮೊನ್ನೆಯದಾಗಿರದೆ, ಮಾನವಸಮಾಜದಷ್ಟೇ ಪುರಾತನವಾದುದಾಗಿದೆ. ಸ್ವಾಭಾವಿಕವಾಗಿಯೇ ಮನುಷ್ಯ ಕಥೆ ಹೇಳುವುದನ್ನು ಕಲೆಯಾಗಿ ಬೆಳೆಸಿಕೊಂಡ. ಶ್ರಮದ ಉಪಶಮನಕ್ಕಾಗಿ ಕಲೆ ಜನ್ಮತಾಳಿತು ಎಂಬುದನ್ನು ಒಪ್ಪಿಕೊಳ್ಳುವುದಾದರೆ, ಕಥೆ ಹುಟ್ಟಿದ್ದೂ ಈ ಅನಿವಾರ್ಯದ ಫಲವಾಗಿ, ಉಳಿದದ್ದೂ ಈ ಅವಶ್ಯದ ಕಾರಣಕ್ಕಾಗಿ. ಆದಿವಾಸಿಗಳಲ್ಲಿ ಕೆಲವು ವಿಶೇಷ ಸಂದರ್ಭಗಳಲ್ಲಿ ಕೆಲವು ರೀತಿಯ ಕಥೆಗಳನ್ನು ಹೇಳುತ್ತಿದ್ದುದು ಗೋಚರಿಸುತ್ತದೆ. ಕೆಲವನ್ನು ಚಳಿಗಾಲದಲ್ಲೂ ಕೆಲವನ್ನು ಬೇಸಗೆಯಲ್ಲೂ ಹೇಳುತ್ತಿದ್ದರು. ಕೆಲಸದ ಸಮಯದಲ್ಲಿ ಕೆಲಸದ ಶ್ರಮವನ್ನು ಮರೆಯಲು ಕಥೆಗಳನ್ನು ಹೇಳುತ್ತಿದ್ದರು, ಕೇಳುತ್ತಿದ್ದರು. ಸಂಜೆ ಕೆಲಸ ಮುಗಿದ ಮೇಲೆ ಬೆಂಕಿ ಕಾಯಿಸುತ್ತ, ರಾತ್ರಿ ಊಟ ಮುಗಿದ ಮೇಲೆ ಬೆಳದಿಂಗಳಿನಲ್ಲಿ ಕುಳಿತು ಕಥೆ ಹೇಳುವುದು, ಕೇಳುವುದು ವಾಡಿಕೆ. ಮಕ್ಕಳನ್ನು ಮಲಗಿಸಲು ಕಥೆ ದೊಡ್ಡ ಸಾಧನವಾಗಿ ಬಳಕೆಯಾಗುತ್ತದೆ. ರಾಜನಂಥವ ಕಥೆ ಕೇಳಲು ಕಥೆಗಾರರನ್ನೇ ನೇಮಿಸಿಕೊಂಡಿದ್ದ. ಕಥೆ ಹೇಳುವುದನ್ನು ವಿಶೇಷ ಉದ್ಯೋಗವನ್ನಾಗಿ ಮಾಡಿಕೊಂಡವರೂ ಇದ್ದರು. ಆದರೆ ಇಂಥವರು ವಿರಳವೆಂದೇ ಹೇಳಬೇಕು. ಕಥೆಗಳನ್ನು ಹೇಳಲು ಹಾಗೂ ಕೇಳಲು ಪುರುಷರು, ಸ್ತ್ರೀಯರು ಮತ್ತು ಬಾಲಕರು-ಯಾರಾದರೂ ಆಗಬಹುದು. ಜನಪದ ಕಥೆಗಳಲ್ಲಿ ಹೆಚ್ಚು ಆಸಕ್ತಿಯನ್ನು ತಾಳುವವರಲ್ಲಿ ಬಾಲಕರು ಪ್ರಧಾನರು.

**ಜಾನಪದ ಕಥೆಯ ಅರ್ಥ:-**

ತಲೆಮಾರಿನಿಂದ ತಲೆಮಾರಿಗೆ ರೂಪಾಂತರಗೊಂಡೋ ಹಾಗೆಯೋ ಬರೆವಣಿಗೆಯ ಮೂಲಕವೊ ಬಾಯ ಮೂಲಕವೋ ನಿರಂತರವಾಗಿ ಸಾಗಿ ಬಂದಿರುವ **ಕಥೆ**. ಈ ಮಾತು ವ್ಯಾಪಕವಾದ ಅರ್ಥದಲ್ಲಿ ಎಲ್ಲ

ಸಾಂಪ್ರದಾಯಿಕ ಕಥನರೂಪಗಳನ್ನೂ ಒಳಗೊಳ್ಳುತ್ತದೆ. **ಜನಪದ ಕಥೆಗಳು** ಕನ್ನಡದಲ್ಲಿ ಅಜ್ಜಿಯ **ಕಥೆಗಳು** ಎಂಬುದಾಗಿ ಪ್ರಸಿದ್ದಿ ಪಡೆದಿವೆ.

**ಜನಪದ ಕಥೆಯ ಸ್ವರೂಪ :**

ಸಾಮಾನ್ಯವಾಗಿ ಕಥೆ ಹೇಳುವ ಹಾಗೂ ಕೇಳುವ ಕ್ರಿಯೆ ಜಗತ್ತಿನ ಯಾವುದೇ ಭಾಗಕ್ಕೆ ಸೀಮಿತವಾದುದಲ್ಲ. ಮಾನವ ಇರುವ ಕಡೆಯಲ್ಲೆಲ್ಲ ಇದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಆದ್ದರಿಂದ ಪ್ರಪಂಚದ ಎಲ್ಲ ಕಥೆಗಳಲ್ಲಿಯೂ ಕಾಣಬರುವ ಒಂದು ಸರ್ವಸಾಮಾನ್ಯ ಗುಣವೆಂದರೆ ಏಕರೂಪತೆ. ಇದಕ್ಕೆ ಕಥೆಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣ ಬೆಳೆಸಿರುವುದು ಕಾರಣವಿರಬಹುದು ಅಥವಾ ಕಥೆ ಹೇಳುವ ಮಾನವನ ಮೂಲ ಪ್ರವೃತ್ತಿ ಕಾರಣವಿರಬಹುದು. ಈ ಏಕರೂಪತೆಯ ಜೊತೆಯಲ್ಲಿಯೇ ವ್ಯತ್ಯಾಸವೂ ಕಂಡುಬರುತ್ತದೆ. ಆದ್ದರಿಂದ ಏಕರೂಪತೆಯಲ್ಲಿ ಭಿನ್ನತೆ ಜನಪದ ಕಥೆಯ ವಿಶಿಷ್ಟ ಲಕ್ಷಣವಾಯಿತು. ಜನಪದ ಕಥೆಯ ಸ್ವರೂಪವನ್ನು ಕುರಿತು ಹೇಳುವಾಗ ಈ ಹಿನ್ನೆಲೆಯನ್ನು ಅವಶ್ಯವಾಗಿ ಪರಿಭಾವಿಸಬೇಕಾಗುತ್ತದೆ.

**ಜನಪದ ಕಥೆಗಳ ಲಕ್ಷಣಗಳು:-**

1 ಬಹುಮುಖ್ಯವಾದ ಕ್ರಿಯೆಯೊಂದರಿಂದ ಪ್ರಾರಂಭವಾಗುವುದಿಲ್ಲ ಮತ್ತು ಇದ್ದಕ್ಕಿದ್ದಂತೆ ಮುಕ್ತಾಯವಾಗುವುದಿಲ್ಲ. ಸಾವಕಾಶವಾದ ಪ್ರವೇಶವಿದ್ದು, ಶಿಖರವನ್ನು ತಲಪಿದ ಮೇಲೂ ನಿಲುಗಡೆಯ ಸ್ಥಾನದ ತನಕ ಮುಂದುವರಿಯುತ್ತದೆ. 2 ಪುನರಾವರ್ತನೆ ಸಾಮಾನ್ಯವಾಗಿ ಎಲ್ಲ ಕಡೆಯಲ್ಲೂ ಕಂಡುಬರುತ್ತದೆ. ಇದು ಕಥೆಯನ್ನು ನಿರೀಕ್ಷೆಯಲ್ಲಿಡುವುದಲ್ಲದೆ, ಅದರ ಶರೀರವನ್ನು ಪುಷ್ಟಗೊಳಿಸಿ ಸಮರ್ಥಿಸುತ್ತದೆ. ಈ ಪುನರಾವರ್ತನೆ ಬಹುಮಟ್ಟಿಗೆ ಮೂರುಮಡಿಯಿದ್ದು, ಕೆಲವು ದೇಶಗಳಲ್ಲಿನ ಧಾರ್ಮಿಕ ಸಂಕೇತದ ಕಾರಣದಿಂದಾಗಿ ನಾಲ್ಕುಮಡಿಯೂ ಆಗಬಹುದು.

3 ಸಾಮಾನ್ಯವಾಗಿ ಏಕಕಾಲದಲ್ಲಿ ಇಬ್ಬರು ವ್ಯಕ್ತಿಗಳು ಮಾತ್ರ ಒಂದು ದೃಶ್ಯದಲ್ಲಿ ಕಾಣಿಸಿಕೊಳ್ಳುತ್ತಾರೆ. ಇನ್ನೂ ಹೆಚ್ಚಿಗೆ ಇದ್ದರೂ ಇಬ್ಬರು ಮಾತ್ರ ಏಕಕಾಲದಲ್ಲಿ ಕ್ರಿಯಾಶೀಲರಾಗಿರಬೇಕು.

4 ವೈದೃಶ್ಯ ಪಾತ್ರಗಳ ಪರಸ್ಪರ ಸಮಾಗಮ-ನಾಯಕ ಮತ್ತು ಪ್ರತಿನಾಯಕ ಶಿಷ್ಟ ಮತ್ತು ದುಷ್ಟ.

5 ಒಂದೇ ಪಾತ್ರದಲ್ಲಿ ಇಬ್ಬರೇನಾದರೂ ಕಾಣಿಸಿಕೊಂಡರೆ, ಅವರು ಚಿಕ್ಕವರಾಗಿ ಅಥವಾ ಅಶಕ್ತರಾಗಿ ಚಿತ್ರಿತವಾಗಿರುತ್ತಾರೆ. ಅವರು ಅನೇಕ ವೇಳೆ ಅವಳಿಗಳಾಗಿದ್ದು, ಶಕ್ತರಾಗಿ ಪರಿಣಮಿಸಿದರೆ, ವೈರಿಗಳಾಗುವ ಸಾಧ್ಯತೆಯುಂಟು.

6 ದುರ್ಬಲ ಮತ್ತು ಕೀಳು ಆಗಿರುವವರು ಉತ್ತಮರಾಗುವ ಸಾಧ್ಯತೆ ಇದೆ. ಕಿರಿಯ ಸೋದರ ಅಥವಾ ಸೋದರಿ ಸಾಮಾನ್ಯವಾಗಿ ಜಯ ಗಳಿಸುವವರು.

7 ಪಾತ್ರಚಿತ್ರಣ ಸರಳ. ಕಥೆಗೆ ನೇರವಾಗಿ ಸಂಬಂಧಪಟ್ಟ ಗುಣಗಳು ಮಾತ್ರ ನಿರೂಪಿತವಾಗಿರುತ್ತವೆ. ಪಾತ್ರದ ಕಥೆಗೆ ಹೊರತಾದ ಯಾವುದೇ ಜೀವನದ ಸುಳಿವು ಕೂಡ ಇರುವುದಿಲ್ಲ.

8 ಕಥಾವಸ್ತು ಸರಳ, ಸಂಕೀರ್ಣವಲ್ಲ. ಒಂದು ಕಾಲದಲ್ಲಿ ಒಂದು ಕಥೆಯನ್ನು ಮಾತ್ರ ಹೇಳಬೇಕು. ಎರಡು ಅಥವಾ ಹೆಚ್ಚು ಕಥೆಗಳು ಒಂದೇ ಕಾಲದಲ್ಲಿ ಬಂದರೆ ಆಗ ಅದು ಜನಪದ ಕಥೆಯ ಜಾಯಮಾನವಾಗಿರದೆ, ಸಾಹಿತ್ಯದ ಆಭಾಸವಾಗಿರುತ್ತದೆ.

9 ಪ್ರತಿಯೊಂದು ಸಾಧ್ಯವಾದಷ್ಟು ಸರಳವಾಗಿ ನಡೆಯುತ್ತದೆ. ಸಮಾನ ವಿಷಯಗಳೆಲ್ಲವೂ ಪೂರಕವಾಗಿರುತ್ತವೆ. ವೈವಿಧ್ಯವನ್ನು ತರುವ ಯಾವುದೇ ಪ್ರಯತ್ನ ಇಲ್ಲಿಲ್ಲ.

ಮೇಲಿನ ಸಾಮಾನ್ಯ ಲಕ್ಷಣಗಳ ಜೊತೆಗೆ ಕೆಲವು ವಿಶೇಷ ಲಕ್ಷಣಗಳೂ ಇವೆ. ಇವುಗಳಲ್ಲಿ ಮೊದಲನೆಯದು ಪಾತ್ರಗಳು, ಮನುಷ್ಯ ಪಾತ್ರವಹಿಸುವುದಲ್ಲದೆ, ದೇವತೆ, ಪ್ರಾಣಿ, ದೆವ್ವ, ಬೇತಾಳ, ರಾಕ್ಷಸ ಮೊದಲಾದ ಮನುಷ್ಯೇತರರೂ ಭಾಗವಹಿಸುತ್ತಾರೆ. ಸ್ವರ್ಗ, ಮತ್ರ್ಯ, ನರಕ-ಈ ಮೂರೂ ಲೋಕಗಳಿಗೂ ಇವರ ಸಂಬಂಧವುಂಟು. ನಾಯಕ, ಪ್ರತಿನಾಯಕ ಹಾಗೂ ನಾಯಿಕೆ ಇವರು ಸಾಮಾನ್ಯವಾಗಿ ಇದ್ದೇ ಇರುತ್ತಾರೆ. ಇವರೆಲ್ಲರಿಗೂ ಸಾಹಸವೇ ಮೂಲವಾಗಿರುವುದರಿಂದ ಸಮಸ್ಯೆ ತಾನಾಗಿ ಗೋಚರಿಸುತ್ತದೆ. ಕಥಾನಾಯಕನಿಗೆ ಸಂಬಂಧಪಟ್ಟ ಒಂದು ವಿಶೇಷ ಅಂಶವೆಂದರೆ ಕಿರಿಯ ಮಗನ ವಿಚಾರ. ಸಾಮಾನ್ಯವಾಗಿ ಕಿರಿಯ ಮಗನೇ ಕಥಾನಾಯಕನೂ ಸಾಹಸಿಯೂ ಆಗಿರುತ್ತಾನೆ. ಪ್ರಾಯಶಃ ಹಿರಿಯ ಮಗ ಮನೆಯವರೆಲ್ಲರನ್ನೂ ನೋಡಿಕೊಳ್ಳುವ ಹೊಣೆಯನ್ನು ಹೊತ್ತುಕೊಳ್ಳಬೇಕಾಗಿರುವುದರಿಂದ ಸಂಸಾರದಲ್ಲಿ ಅವನ ಪ್ರಾಧಾನ್ಯ ಹೆಚ್ಚಾಗಿರುತ್ತದೆ. ಆಗ ಕೆಲಮಟ್ಟಿಗೆ ವಂಚಿತನಾದ ಕಿರಿಯವನು ಬದುಕಲು ಸಾಹಸಿಯಾಗಿರಬೇಕಾಗುತ್ತದೆ. ಆಗ ಅವನು ಅನಿವಾರ್ಯವಾಗಿ ಸ್ವತಂತ್ರನಾಗಿರುತ್ತಾನೆ. ಪ್ರತಿನಾಯಕ ಖಚಿತವಾಗಿ ಗೊತ್ತಾಗುವುದಿಲ್ಲ. ತನ್ನವರೇ ಆದವರು ನಾಯಕನಿಗೆ ಒಳ್ಳೆಯದನ್ನು ಅಥವಾ ಕೆಟ್ಟದ್ದನ್ನು ಮಾಡಬಹುದು. ಸಂಸಾರದಲ್ಲಿನ ಹೆಂಗಸು ಬಹುಮಟ್ಟಿಗೆ ಖಳನಾಯಕಿಯ ಪಾತ್ರವನ್ನು ವಹಿಸುವುದು ಸಾಮಾನ್ಯ. ಮಲತಾಯಿಯ ಪಾತ್ರ ಇದರಲ್ಲಿ ಪ್ರಮುಖವಾದುದು. ಎಷ್ಟೋ ಸಮಯದಲ್ಲಿ ಕಥೆಯಲ್ಲಿ ಪ್ರಧಾನವಲ್ಲದ ಪಾತ್ರಗಳೇ ಪ್ರಮುಖವೆನಿಸುವುದುಂಟು. ಕಥೆಯಲ್ಲಿ ಕರುಣಾಳು ಸಹಾಯಕರ ಪಾತ್ರವೂ ಗಮನಾರ್ಹವಾದುದು. ನಾಯಕನಿಗೆ ಮಾನುಷ ಅಥವಾ ಅತಿಮಾನುಷ ಸಹಾಯಕರಿಗಿಂತ ಎಷ್ಟೋ ಸಾರಿ ಪ್ರಾಣಿಸಹಾಯಕರಿಂದ ಹೆಚ್ಚು ಅನುಕೂಲ ದೊರೆಯುವುದು.

**ಜಾನಪದ ಕಥೆಯ ಪ್ರಕಾರಗಳು:**

***ಜಾನಪದ ಕಥೆಗಳಲ್ಲಿ ಮೂರು ವಿಧಗಳಿವೆ:***

- **ಪ್ರಾಣಿಗಳ ಬಗ್ಗೆ ಕಾಲ್ಪನಿಕ ಕಥೆಗಳು.**

ಇದೇ ಕಥೆಗಳು ಮೊದಲಿನಿಂದಲೂ ಓದಬೇಕು (5-6 ವರ್ಷಗಳವರೆಗೆ). ಅವು ಶಾಶ್ವತ ಪಾತ್ರಗಳನ್ನು ಒಳಗೊಂಡಿರುತ್ತವೆ (ಕರಡಿ, ತೋಳ, ನರಿ, ಮೊಲ, ಮುಳ್ಳುಹಂದಿ, ಇತ್ಯಾದಿ). ಮೂಲತಃ, ಪ್ರಾಣಿಗಳ ನಿರಂತರ ಚಿಹ್ನೆಗಳನ್ನು ಸೂಚಿಸಲಾಗುತ್ತದೆ (ನರಿ - ಕುತಂತ್ರ, ಕರಡಿ - ಬಲವಾದ, ಬೆಕ್ಕು - ಸ್ಮಾರ್ಟ್, ಮೊಲ - ಭಯಭೀತ, ಇತ್ಯಾದಿ). ಈ ಕಥೆಗಳಲ್ಲಿ, ಕೋವ್ಯುಲೇಟಿವ್ ಕಥೆಗಳು ಎದ್ದು ಕಾಣುತ್ತವೆ - ಕಥಾವಸ್ತುವಿನ ಸಂಪರ್ಕದ ತತ್ವಕ್ಕೆ ಅನುಗುಣವಾಗಿ ಆಯ್ಕೆಮಾಡಲಾಗಿದೆ ("ಟರ್ನಿಪ್", "ಕೊಲೊಬಾಕ್", "ಟೆರೆಮೊಕ್"). ಅವುಗಳಲ್ಲಿ ಹಲವು - ಬಾಲಿಶ ಭಾಷೆಯ with ಾಯೆಯೊಂದಿಗೆ (ಇಲಿ-ಕುಪ್ಪಸ, ಬೆಕ್ಕು - ಬಿಳಿ ಹೊಟ್ಟೆ);

- **ದೈನಂದಿನ ಕಥೆಗಳು.**

ಅವರು ನಿಜ ಜೀವನ, ಸಾಮಾಜಿಕ ವಿಷಯ, ನಕಾರಾತ್ಮಕ ಮಾನವ ಗುಣಗಳ ಅಪಹಾಸ್ಯವನ್ನು ತೋರಿಸುತ್ತಾರೆ. ಉನ್ನತ ನೈತಿಕ ಗುಣಗಳು ಶ್ರೀಮಂತ ಮತ್ತು ಉನ್ನತ ಶ್ರೇಣಿಯ ಜನರಿಗೆ ಸೇರಿಲ್ಲ, ಆದರೆ ಜನರ ಪ್ರತಿನಿಧಿಗಳಿಗೆ (ಸೈನಿಕ, ವೃದ್ಧ). ಅದು ಗೆಲ್ಲುವುದು ಹಣ ಮತ್ತು ಶಕ್ತಿಯಲ್ಲ, ಆದರೆ ಬುದ್ಧಿವಂತಿಕೆ ಮತ್ತು ಕೌಶಲ್ಯ. ತೀಕ್ಷ್ಣವಾದ ನಕಾರಾತ್ಮಕ ಗುಣಲಕ್ಷಣಗಳನ್ನು ಮಾಸ್ಟರ್, ಪಾದ್ರಿ, ತ್ಸಾರ್ ಮತ್ತು ಇತರರಿಗೆ ನೀಡಲಾಗುತ್ತದೆ. ಸಾಮಾಜಿಕ ಕ್ರಮವನ್ನು ಬದಲಾಯಿಸುವ ಬಯಕೆ ಇದ್ದಾಗ ಇಂತಹ ಕಥೆಗಳು ಕಾಣಿಸಿಕೊಂಡವು ಮತ್ತು ಅವರು ಜನರ (ಲೇಖಕ) ಪ್ರಜಾಪ್ರಭುತ್ವ ಮನೋಭಾವವನ್ನು ವ್ಯಕ್ತಪಡಿಸಿದರು. ಸಾಮಾಜಿಕ ಮತ್ತು ದೈನಂದಿನ ಕಾಲ್ಪನಿಕ ಕಥೆಗಳಲ್ಲಿ, ಶ್ಲೇಷೆಗಳು, ಹಾಸ್ಯ, ಆಕಾರ-ಪರಿವರ್ತಕಗಳು, ನಗು, ವಿಡಂಬನೆ ವ್ಯಾಪಕವಾಗಿ ಬಳಸಲಾಗುತ್ತದೆ.

- **ಕಾಲ್ಪನಿಕ ಕಥೆಗಳು.**

ಅವರು ರೋಮ್ಯಾಂಟಿಕ್ ವೀರರನ್ನು ಒಳಗೊಂಡಿರುತ್ತಾರೆ, ಇದರಲ್ಲಿ ವ್ಯಕ್ತಿಯ ಉತ್ತಮ ಗುಣಗಳು ಸಾಕಾರಗೊಳ್ಳುತ್ತವೆ. ಈ ಕಾಲ್ಪನಿಕ ಕಥೆಗೆ ಅಗತ್ಯವಿದೆ: ಧನಾತ್ಮಕ ನಾಯಕನ ಚಿತ್ರ + ಸಹಾಯಕರು + ಮ್ಯಾಜಿಕ್ ವಸ್ತುಗಳು. ಅಂತಹ ಕಥೆಗಳಲ್ಲಿ ಮುಖ್ಯ ವಿಷಯವೆಂದರೆ ಪ್ರೀತಿಯ

ಹೋರಾಟ, ಸತ್ಯಕ್ಕಾಗಿ, ಒಳ್ಳೆಯದಕ್ಕಾಗಿ. ಅವುಗಳನ್ನು ಶ್ರೀಮಂತ ಭಾಷೆ, ಬಣ್ಣ ವ್ಯಾಖ್ಯಾನಗಳು, ನಕಾರಾತ್ಮಕ ಪಾತ್ರಗಳು - ಅದ್ಭುತ (ಬಾಬಾ-ಯಾಗ, ಲೆಶಿ, ಕಿಕಿಮೊರಾ, ಸರ್ಪ-ಗೋರಿನಿಚ್) ನಿಂದ ನಿರೂಪಿಸಲಾಗಿದೆ. ಕಾಲ್ಪನಿಕ ಕಥೆಗಳ ರಚನೆಗೆ ಸಂಬಂಧಿಸಿದಂತೆ, ಒಂದು ಅಸಾಧಾರಣ ಆರಂಭ ಇರಬೇಕು (ಒಂದು ಕಾಲದಲ್ಲಿ), ಮಧ್ಯ (ಸಂಜೆಯ ಬೆಳಿಗ್ಗೆ ಬುದ್ಧಿವಂತ, ಎಷ್ಟು ಸಮಯ ಚಿಕ್ಕದಾಗಿದೆ) ಮತ್ತು ಅಂತ್ಯ (ಮತ್ತು ನಾನು ಅಲ್ಲಿದ್ದೆ, ಜೇನು - ಕುಡಿಯುವುದು ಬಿಯರ್);

**ಜನಪದ ಕಥೆಯ ವರ್ಗೀಕರಣ :**

ಸಾಂಪ್ರದಾಯಿಕ ಕಥನಗಳಲ್ಲಿ ವಾಕ್‌ಸಂಪ್ರದಾಯದ ಕಥೆಗಳು ಮತ್ತು ಸಾಹಿತ್ಯಿಕ ಕಥೆಗಳು ಎಂದು ಎರಡು ವಿಧಗಳಿವೆ. ಇವನ್ನು ಶುದ್ಧವಾಗಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ಸಾಹಿತ್ಯಿಕ ಕಥೆಗಳೇ ಕ್ರಮೇಣ ಸಾಹಿತ್ಯಿಕ ಕಥೆಗಳಾಗಿ ಚಲಾವಣೆಯಾಗಬಹುದು. ಜನಪದ ಕಥೆಗಳಲ್ಲಿ ಕೆಲವು ಒಂದು ಖಂಡಕ್ಕೆ, ದೇಶಕ್ಕೆ, ಜನಾಂಗಕ್ಕೆ ಸೀಮಿತವಾಗಿರುವ ಸಾಧ್ಯತೆಯೂ ಇರುತ್ತದೆ. ಆದ್ದರಿಂದ ಜನಪದ ಕಥೆಯ ವರ್ಗೀಕರಣ ಕಷ್ಟತರವೂ ತುಂಬ ಜವಾಬ್ದಾರಿಯುತವೂ ಆದುದಾಗಿದೆ. ಆದರೆ ಕಥೆಗಳ ಅಧ್ಯಯನದ ದೃಷ್ಟಿಯಿಂದ ಕೆಲವು ಪ್ರಕಾರಗಳನ್ನು ನಿರ್ದೇಶಿಸುವುದು ಉಚಿತವೆಂದು ತೋರುತ್ತದೆ. ಹೀಗೆ ಗುರುತಿಸಬಹುದಾದ ಭಿನ್ನ ಭಾಗಗಳು ಸಂಪೂರ್ಣ ನಿಷ್ಕøಷ್ಟ ಎಂದು ಹೇಳಲು ಸಾಧ್ಯವಿಲ್ಲ. ಯಾವ ಜನಪದ ಕಥೆಗಾರನೂ ಇವನ್ನು ಉಲ್ಲೇಖಿಸಿಲ್ಲ. ಈ ಬಗ್ಗೆ ಹಲವಾರು ವಿದ್ವಾಂಸರು ತಮ್ಮದೇ ರೀತಿಯಲ್ಲಿ ವಿಭಾಗಮಾಡಿ ವಿಶ್ಲೇಷಿಸಿದ್ದಾರೆ. ಇಲ್ಲಿ ಅಂಥ ಪ್ರಮುಖರನ್ನು ಮಾತ್ರ ತೆಗೆದುಕೊಳ್ಳಬಹುದು.

ಮೊದಲಿಗೆ, ಎಡ್ವಿನ್ ಸಿಡ್ನಿ ಹಾರ್ಟ್‌ಲ್ಯಾಂಡ್ ಮತ್ತು ವಾನ್‌ದೇರ್ ಲೇಯನ್ ಎಂಬ ಇಬ್ಬರು ವಿದ್ವಾಂಸರು ಜನಪದ ಕಥೆಗಳನ್ನೆಲ್ಲ ಸಾಗ್ ಮತ್ತು ಮಾರ್ಷನ್ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ಸಾಗ ಗೊತ್ತಾದ ಸ್ಥಳವೊಂದಕ್ಕೆ ಸಂಬಂಧಿಸಿದುದು. ಆವರಣ ಅತಿಮಾನುಷ, ಪಾತ್ರ ಅರ್ಧಚಾರಿತ್ರಿಕ, ರಚನೆ ಬಹುತೇಕವಾಗಿ ಸರಳ. ಕಲ್ಪನೆಯನ್ನೇ ಪ್ರಧಾನವಾಗುಳ್ಳ ಷರ್ಮಾನ್‌ಗೆ ಗೊತ್ತಾದ ಕಾಲವಿಲ್ಲ ಮತ್ತು ಗೊತ್ತಾದ ಸ್ಥಳವಿಲ್ಲ. ಇದು ನಡೆಯುವುದೆಲ್ಲ ಅವಾಸ್ತವ ಪ್ರಪಂಚದಲ್ಲಿ. ಇಡೀ ಕಥೆ ಸಾಹಸಮಯವಾದ ಘಟನೆಗಳಿಂದ ತುಂಬಿಕೊಂಡಿರುತ್ತದೆ. ರಚನೆಯ ದೃಷ್ಟಿಯಿಂದ ನೋಡಿದರೆ ಇವು ಸಾಕಷ್ಟು ಉದ್ದವಾಗಿರುತ್ತವೆ ಮತ್ತು ಸಂಕೀರ್ಣವಾಗಿರುತ್ತವೆ (ನೋಡಿ- ಕಟ್ಟುಕಥೆ). ಮಿಲ್ಲರ್ ಎಂಬ ವಿದ್ವಾಂಸ ಕಿನ್ನರ ಕಥೆಗಳು,

ದೈನಂದಿನ ಕಥೆಗಳು ಮತ್ತು ಪ್ರಾಣಿ ಕಥೆಗಳು ಎಂಬುದಾಗಿ ಮೂರು ರೀತಿಯಲ್ಲಿ ವರ್ಗೀಕರಿಸಿಕೊಳ್ಳುತ್ತಾನೆ. ಈ ವರ್ಗೀಕರಣದಲ್ಲಿ ಮೊದಲ ಮತ್ತು ಕಡೆಯ ಪ್ರಕಾರಗಳನ್ನು ಪರಿಗಣಿಸಬಹುದಾದರೂ ಮಧ್ಯದ ವಿಭಾಗವನ್ನು ನಿರ್ದಿಷ್ಟ ರೀತಿಯಲ್ಲಿ ವಿವರಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ ಇದು ಪೂರ್ಣ ವರ್ಗೀಕರಣವಲ್ಲದ್ದರಿಂದ, ಸಮರ್ಪಕವೆನಿಸುವುದಿಲ್ಲ. ವುಂಟ್ ಎಂಬ ಜರ್ಮನ್ ವಿದ್ವಾಂಸ ಜನಪದ ಕಥೆಗಳಲ್ಲಿ ಪೌರಾಣಿಕ ನೀತಿಕಥೆಗಳು, ಶುದ್ಧ ಕಿನ್ನರ ಕಥೆಗಳು, ಜೈವಿಕ ಕಥೆಗಳು ಮತ್ತು ನೀತಿಕಥೆಗಳು, ಶುದ್ಧ ಪ್ರಾಣಿಕಥೆಗಳು, ವಾಂಶಿಕ ಕಥೆಗಳು, ತಮಾಷೆ ಕಥೆಗಳು ಮತ್ತು ನೀತಿಕಥೆಗಳು ಎಂಬುದಾಗಿ ಏಳು ವಿಭಾಗಗಳನ್ನು ಹೆಸರಿಸುತ್ತಾನೆ. ಆದರೆ ಇದು ವಿವರವಾದ ವರ್ಗೀಕರಣವಾಗಿದ್ದು ಪುನರುಕ್ತಿ ದೋಷದಿಂದ ಕೂಡಿರುವುದನ್ನು ಕಾಣಬಹುದು. ಬ್ರಿಟಾನಿಕ ವಿಶ್ವಕೋಶದಲ್ಲಿ ಪುರಾಣ, ಐತಿಹ್ಯ, ಮತ್ತು ಜನಪ್ರಿಯ ಕಥೆಗಳು ಎಂದು ಮೂರು ಭಾಗಗಳಾಗಿ ವರ್ಗೀಕರಿಸಲಾಗಿದೆ. ಜನಪ್ರಿಯ ಕಥೆಗಳಲ್ಲಿಯೇ ವಿಶೇಷ ಲಕ್ಷಣಗಳಿಂದ ಕೂಡಿದ ಬೇರೆ ಬೇರೆ ಕಥನ ಪ್ರಕಾರಗಳಿರುವ ಸಾಧ್ಯತೆಯನ್ನು ಇದು ತಿಳಿಸುವುದಿಲ್ಲ. ಅಲ್ಲದೆ ಜನಪ್ರಿಯ ಕಥೆಗಳು ಎಂಬ ಮಾತನ್ನು ಎಷ್ಟೇ ಎಚ್ಚರದಿಂದ ಬಳಸಿದರೂ ಪುರಾಣ ಮತ್ತು ಐತಿಹ್ಯಗಳ ಸೋಂಕಿನಿಂದ ಸಂಪೂರ್ಣವಾಗಿ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಮೇಲಿನದಷ್ಟೇ ಹೆಚ್ಚು ಕಡಿಮೆ ಗೊಂದಲಕ್ಕೆ ಅವಕಾಶ ಕೊಟ್ಟಿರುವ ಮತ್ತೊಂದು ಪ್ರಕಾರ ಐತಿಹ್ಯದ ಕಥೆ. ಕೆಲವು ಭಾಷೆಗಳಲ್ಲಿ ಇದು ಸಾಧು ಜೀವನಕ್ಕೆ ಸಂಬಂಧಿಸಿದ್ದು. ಕೆಲವರು ಐತಿಹ್ಯ ಮತ್ತು ಸಂಪ್ರದಾಯಗಳನ್ನು ಜೊತೆಯಲ್ಲಿಯೇ ನೋಡಲು ಯತ್ನಿಸಿದ್ದಾರೆ. ಐತಿಹ್ಯಗಳಲ್ಲಿ ಸೃಷ್ಟಿಗೆ ಸಂಬಂಧಿಸಿದ ವಿವರಣಾತ್ಮಕ ಐತಿಹ್ಯಗಳು, ಅತಿಮಾನುಷ ವ್ಯಕ್ತಿಗಳನ್ನು ಕುರಿತ ಐತಿಹ್ಯಗಳು ಮತ್ತು ಜಾರಿತ್ರಿಕ ಅಭಾಸದ ಐತಿಹ್ಯಗಳು ಎಂದು ಮೂರು ವಿಭಾಗಗಳಿರುತ್ತವೆ. ಇವು ನಡೆದ ಘಟನೆಗಳ ಪಳೆಯುಳಿಕೆಗಳು. ಕಥೆಗಾರನಿಂದ ನಂಬಿ ಬಂದವುಗಳು. ಗೊತ್ತಾದ ಸ್ಥಳ ಕಾಲಗಳಿಗೆ ಸಂಬಂಧಿಸಿದವುಗಳು. (ನೋಡಿ- ಐತಿಹ್ಯ) ಜನಪದ ಕಥೆಗಳಲ್ಲೆಲ್ಲ ಸುಲಭವಾಗಿ ಪ್ರಯಾಣ ಮಾಡಬಹುದಾದ, ಹೆಚ್ಚು ಪ್ರಮಾಣದಲ್ಲಿ ದೊರೆಯಬಹುದಾದ ಕಥೆಗಳೆಂದರೆ ಕಿನ್ನರ ಕಥೆಗಳು. ಇದರಷ್ಟು ಓದುಗರನ್ನು ಸೂರೆಗೊಳ್ಳಬಲ್ಲ ಪ್ರಕಾರ ಮತ್ತೊಂದಿಲ್ಲ. ಇದರಲ್ಲಿರುವ ಅದ್ಭುತ ರಂಜಕತೆ ಹಾಗೂ ಸಾಹಸಪ್ರಿಯತೆಗಳೇ ಇದಕ್ಕೆ ಕಾರಣ. ಇಲ್ಲಿ ಬರುವ ಪಾತ್ರಗಳೆಲ್ಲ ಬಹುತೇಕವಾಗಿ ರಾಜರಾಣಿಯರು, ಮಂತ್ರಿಮುಖ್ಯರು. ನಡೆಯುವುದು ಒಂದಾನೊಂದು ಊರಿನಲ್ಲಿ, ಒಂದಾನೊಂದು ಕಾಲದಲ್ಲಿ. ಸಾಕಷ್ಟು ದೀರ್ಘವಿರುವ ಈ ಕಥೆಗಳಲ್ಲಿ ಒಬ್ಬ ನಾಯಕ

ಅಥವಾ ನಾಯಿಕೆ ಇರುತ್ತಾರೆ. ಹಾಸ್ಯ ಅಲ್ಲಲ್ಲಿ ಕಂಡುಬಂದರೂ ಒಟ್ಟಾರೆ ಇವು ಗಂಭೀರ ಕೃತಿಗಳು. ನಿರ್ಗತಿಕನೂ ದೀನನೂ ಆಗಿ ಮೊದಮೊದಲ ಕಾಣಸಿಕೊಂಡ ನಾಯಕ ಹಲವಾರು ಸಾಹಸಕೃತ್ಯಗಳನ್ನು ಎಸಗಿದಮೇಲೆ ನಿರೀಕ್ಷಿಸಿದ ಗುರಿಗೆ ತಲಪುತ್ತಾನೆ. ಕಥೆ, ನಾಯಕ ನಾಯಕಿಯರ ವಿವಾಹದಲ್ಲಿ ಮುಕ್ತಾಯಗೊಳ್ಳುತ್ತದೆ. ಇಲ್ಲ ಅತಿಮಾನುಷ ವಸ್ತುಗಳದು ಮಹತ್ತ್ವದ ಪಾತ್ರ. ಕಿನ್ನರ ಕಥೆಯ ಪ್ರತಿವರ್ಗದಲ್ಲೂ ಹಲವಾರು ಆಶಯಗಳು ಸಂಘಟಿತವಾಗಿರುತ್ತವೆ. ಮಾತ್ರವಲ್ಲ ಆಶಯಗಳಿಂದಲೇ ಕಥೆ ಬೆಳೆಯುತ್ತ ಹೋಗುತ್ತದೆ. ವಿವರಗಳಿಗೆ (ನೋಡಿ- ಕಿನ್ನರ-ಕಥೆ).

ಜನಪದ ಕಥೆಗಳಲ್ಲೇ ಅತ್ಯಂತ ಪ್ರಾಚೀನವಾದುದು ಪ್ರಾಣಿಕಥೆ. ಮಾನವನ ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿ ಇದೆಂಬುದು ಕೆಲವರ ಮತ. ಮನುಷ್ಯ ತನ್ನ ಶೈಶವಾವಸ್ಥೆಯಿಂದ ತಾಳಿದ ಕುತೂಹಲ, ಆಸಕ್ತಿಗಳೇ ಇಂಥ ಕಥನಕಲೆಗೆ ಕಾರಣವಾಗಿರಬೇಕು. ಆದಿವಾಸಿಯ ಜೀವನದ ಮೇಲೆ ಪ್ರಭಾವ ಬೀರಿದ ಅತ್ಯಂತ ದೊಡ್ಡ ಶಕ್ತಿಗಳಲ್ಲಿ ಪ್ರಕೃತಿ ಪ್ರಧಾನವಾದುದರಿಂದ ಸಹಜವಾಗಿಯೇ ಆತ ಇದರ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿರಬೇಕು. ವಾಸ್ತವವಾಗಿ ಪ್ರಾಣಿಕಥೆಗಳು ಮೊದಮೊದಲು ಪ್ರಾಕೃತಿಕ ವಿಷಯಗಳ ವಿವರಣೆಗಳಾಗಿದ್ದು, ಉತ್ತರ ಸ್ಥಿತಿಯಲ್ಲಿ ನೀತಿಕಥೆಗಳಾಗಿ ಮಾರ್ಪಾಡಾಗಿರಬೇಕೆಂದು ತೋರುತ್ತದೆ. ಪ್ರಾಣಿಕಥೆಗಳು ರಚನೆಯಲ್ಲಿ ಅತ್ಯಂತ ಚಿಕ್ಕವು. ಸರಳತೆ ಇಲ್ಲಿ ಎದ್ದು ಕಾಣುವ ಗುಣ. ಪ್ರಾಣಿಗಳ ರೂಪ ಸ್ವರೂಪಗಳನ್ನು ಕುರಿತ ವಿವರಣೆಯೇ ಇವುಗಳ ಉದ್ದೇಶ. ಪ್ರಾಣಿಕಥೆಗಳಲ್ಲಿ ಶುದ್ಧ ಪ್ರಾಣಿ ಕಥೆಗಳು ಮತ್ತು ಮಾನವ ಪಾತ್ರವಹಿಸುವ ಪ್ರಾಣಿಕಥೆಗಳು ಎಂದು ಎರಡು ವಿಧ. ಇವನ್ನು ಕಾರ್ಯಕಾರಣಕಥೆಗಳು, ನೀತಿಕಥೆಗಳು ಮತ್ತು ಪ್ರಾಣಿ ಪುರಾಣ ಕಾವ್ಯ ಎಂದು ಮೂರು ವಿಭಾಗಗಳಲ್ಲಿ ಗುರುತಿಸಬಹುದು. ಈ ಎಲ್ಲ ಪ್ರಾಣಿಕಥೆಗಳೂ ನಾಲ್ಕು ಮುಖ್ಯ ಮೂಲಗಳಲ್ಲಿ ದೊರಕುತ್ತವೆ-ಭಾರತದ ಸಾಹಿತ್ಯಿಕ ನೀತಿಕಥೆಗಳು, ಈಸೋಪನ ನೀತಿಕಥೆಗಳು, ಮಧ್ಯಯುಗದ ಸಾಹಿತ್ಯಿಕ ಪ್ರಾಣಿಕಥೆಗಳು ಮತ್ತು ವಾಕ್ಸಂಪ್ರದಾಯದ ಪ್ರಾಣಿಕಥೆಗಳು. ಈ ಎಲ್ಲ ಸಂಪ್ರದಾಯ ಪ್ರವಾಹಗಳ ಪರಸ್ಪರ ಪ್ರಭಾವ ಸಂಬಂಧದಿಂದಾಗಿ ಇವುಗಳಲ್ಲಿ ಬಹಳ ಸಂದಿಗ್ಧತೆ ಮೂಡಿದೆ.

ಪ್ರಾಣಿಕಥೆಯ ಮುಂದಿನ ರೂಪವೇ ನೀತಿಕಥೆ. ನೀತಿಯೇ ಇಲ್ಲಿಯ ಪ್ರಧಾನ ಉದ್ದೇಶ. ಪ್ರಾಣಿಗಳೇ ಇಲ್ಲಿನ ಪಾತ್ರಗಳು. ಪ್ರಾಣಿ ಪಾತ್ರವಹಿಸದ ನೀತಿಕಥೆಗಳೂ ದೊರೆಯುತ್ತವೆ. ಎಷ್ಟೋ ಸಾರಿ ಪ್ರಾಣಿಕಥೆಗಳೂ ನೀತಿಕಥೆಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಕಷ್ಟವಾಗುತ್ತದೆ. ಪ್ರಾಣಿಗಳ ಗುಣಾವಗುಣಗಳ ವಿವರಣೆ ಇವುಗಳ ಗುರಿಯಲ್ಲ, ಮಾನವನಿಗೆ ನೀತಿ

ಬೋಧಿಸುವುದೇ ಇವುಗಳ ಉದ್ದೇಶ. ನಿರೂಪಣೆಯಿಂದ ಪ್ರಾರಂಭವಾದ ಕಥೆ ನೀತಿವಾಕ್ಯವೊಂದರಿಂದ ಮುಕ್ತಾಯವಾಗುತ್ತದೆ. ರಚನೆಯಲ್ಲಿ ಇವು ಬಹಳ ಚಿಕ್ಕವು. ಇಂಥ ನೀತಿಕಥೆಗಳು ಪ್ರಾಣಿಕಥೆಗಳಿಗಿಂತ ಪ್ರಾಚೀನ ಎಂದು ದುರ್ಗಾ ಭಾಗವತ್ ಅಭಿಪ್ರಾಯಪಡುತ್ತಾರೆ. ಆದರೆ ಇದು ನಾಗರಿಕತೆಯ ಪೂರ್ವಸ್ಥಿತಿಯ ಸೃಷ್ಟಿಯಾಗಿರದೆ ನಾಗರಿಕತೆ ಸಂಸ್ಕೃತಿಗಳು ಸಾಕಷ್ಟು ಬೆಳವಣಿಗೆ ಹೊಂದಿದ ಅನಂತರಕಾಲದ ಸೃಷ್ಟಿಯೆಂದೇ ಭಾವಿಸಬೇಕಾಗುತ್ತದೆ. ಅಲ್ಲದೆ, ನೀತಿಕಥೆ ಮೂಲತಃ ಸಾಹಿತ್ಯಿಕ ಸೃಷ್ಟಿಯಾಗಿದ್ದು, ಅನಂತರ ಜಾನಪದ ಸಂಪ್ರದಾಯಕ್ಕೆ ಬಂದಿರಬೇಕೆಂದು ವಿದ್ವಾಂಸರ ಮತ.

ಜನಪದ ಕಥೆಗಳಲ್ಲಿ ಹೆಸರಿಸಬೇಕಾದ ಮತ್ತೊಂದು ಪ್ರಕಾರವೆಂದರೆ ವಿನೋದ ಕಥೆ. ಇದು ಸ್ವಭಾವತಃ ಚಿಕ್ಕದಾಗಿದ್ದು, ಹಾಸ್ಯಪ್ರಧಾನವಾಗಿರುತ್ತದೆ. ಪ್ರಾಣಿಗಳು ಪಾತ್ರವಹಿಸಬಹುದಾದರೂ ಮಾನವ ಪಾತ್ರಗಳೇ ಹೆಚ್ಚು. ದೈನಂದಿನ ಜೀವನವೇ ಇದರ ವಸ್ತು. ಮನೋರಂಜನೆಯೇ ಇದರ ಉದ್ದೇಶ. ಇದರಲ್ಲಿ ಒಂದೇ ಆಶಯವಿರಬಹುದು; ಇಲ್ಲವೆ, ಅನೇಕ ಆಶಯಗಳೂ ಬರಬಹುದು. ಇಲ್ಲಿ ವಾಸ್ತವಿಕತೆ ಮುಖ್ಯವೇ ಹೊರತು, ಅತಿಮಾನುಷತೆಯಲ್ಲ. ಇಲ್ಲಿ ಬರುವ ಪಾತ್ರಗಳೆಲ್ಲ ದಡ್ಡರು. ಹೆಡ್ಡರು-ಸಾಮಾನ್ಯ ತಿಳಿವಳಿಕೆಯೂ ಇಲ್ಲದ ಮೂರ್ಖರು. ವಿನೋದಕಥೆ ಕೆಲವು ಸಾರಿ ನೀತಿಯನ್ನೂ ಹೇಳಬಹುದು. ಸೀಮಿತ ಉದ್ದೇಶವೊಂದನ್ನು ಪ್ರತಿಪಾದಿಸುವುದಕ್ಕಾಗಿ ಹೊರಟ ಈ ಕಥನಪ್ರಕಾರ ಕಲಾತ್ಮಕ ಸೃಷ್ಟಿಯೆಂದೇ ಹೇಳಬೇಕು.

**ಜನಪದ ಕಥೆಯ ಸಿದ್ಧಾಂತಗಳು** :

ಜನಪದ ಕಥೆಯನ್ನು ಕುರಿತ ಅತ್ಯಂತ ಚರ್ಚಾಸ್ಪದ ವಿಷಯವೆಂದರೆ ಅದರ ಮೂಲ ಮತ್ತು ಪ್ರಸಾರವನ್ನು ಕುರಿತದ್ದು. ಇದರ ಬಗೆಗಿನ ನಮ್ಮ ತಿಳಿವಳಿಕೆ ಇನ್ನೂ ಶೈಶವಾವಸ್ಥೆಯಲ್ಲಿಯೇ ಇದೆ. ಕಳೆದ ಶತಕದ ಕಡೆಯ ವರ್ಷಗಳಲ್ಲಿ ಇದರ ಬಗ್ಗೆ ಹೆಚ್ಚು ಆಸಕ್ತಿ ಕಂಡುಬಂದದ್ದಲ್ಲದೆ, ಹಲವಾರು ಸಂಶೋಧನೆಯ ಹೊಸಬಾಗಿಲುಗಳೇ ತೆರೆದವು. ಹೀಗೆ ನೂತನ ಮಾರ್ಗಗಳನ್ನು ತೆರೆದವರಲ್ಲಿ ಗ್ರಿಮ್, ಬೆನ್ಫೆ, ಮ್ಯಾಕ್ಸ್‌ಮುಲ್ಲರ್, ಆ್ಯಂಡ್ರೂ ಲ್ಯಾಂಗ್, ಟೆಯ್‌ಲರ್ ಮತ್ತು ಫ್ರಾಂಚ್ ಜೊಯಸ್ ಅತ್ಯಂತ ಪ್ರಮುಖರಾದವರು. ಜನಪದ ಕಥೆಯ ಪ್ರಾರಂಭಾವಸ್ಥೆ, ಅರ್ಥವ್ಯಾಪ್ತಿ, ಪ್ರಸಾರಸಾಮಾನ್ಯತೆ, ಭಿನ್ನತೆ ಹಾಗೂ ಸಂಬಂಧ ಸ್ವಾರಸ್ಯಗಳು ಇವರ ವಿಷಯಗಳಾದುವು. ಫಲವಾಗಿ ವಾದ ಪ್ರತಿವಾದಗಳು ಕಾಣಿಸಿಕೊಂಡವು. ತಮ್ಮದೇ ಸಿದ್ಧಾಂತಗಳನ್ನು ಇವರು

ಹರಿಯಬಿಟ್ಟರು. ಆ ಎಲ್ಲ ಸಿದ್ಧಾಂತಗಳ ಸವಿವರ ಚರ್ಚೆಗೆ ಹೋಗದೆ ಪ್ರಮುಖವಾದವನ್ನು ಮಾತ್ರ ಇಲ್ಲಿ ಪರಿಶೀಲಿಸಬಹುದು.

ಮೊದಲಿಗೆ ಗಮನಿಸಬಹುದಾದ ಎರಡು ಪ್ರಸಿದ್ಧ ಸಿದ್ಧಾಂತಗಳೆಂದರೆ ಇಂಡೊ-ಯುರೋಪಿಯನ್ ಸಿದ್ಧಾಂತ ಮತ್ತು ಪುರಾಣಮೂಲ ಸಿದ್ಧಾಂತ. ಗ್ರಿಮ್ ಸೋದರರೇ ಈ ಎರಡೂ ತತ್ತ್ವಗಳ ಪ್ರವರ್ತಕರು. ಜನಪದ ಕಥೆಗಳ ಮೂಲ ಸಾದೃಶ್ಯಗಳನ್ನು ಕಂಡುಕೊಂಡ ಇವರು, ಅದರ ಅಂತರರಾಷ್ಟ್ರೀಯತೆಯನ್ನು ಒಪ್ಪಿಕೊಂಡರು. ಹಾಗೆ ಒಪ್ಪಿಕೊಂಡಮೇಲೆ ಈ ಕಥನ ವೃತ್ತಗಳ ಮೂಲವನ್ನು ಹುಡುಕಲು ಹೊರಟು ಕಡೆಗೆ ಎರಡು ಪ್ರಮುಖ ನಿರ್ಣಯಕ್ಕೆ ಬಂದರು: ಕಥೆಗಳು ಇಂಡೊ-ಯುರೋಪಿಯನ್ ವಂಶ ಮೂಲದಿಂದ ಬಂದಿರಬೇಕು ಮತ್ತು ಪುರಾಣಗಳೇ ಒಡೆದು ಅನಂತರ ಜನಪದ ಕಥೆಗಳಾಗಿರಬೇಕು. ಇವುಗಳಲ್ಲದೆ ಅವರು ಇನ್ನೂ ಎರಡು ವಿಷಯಗಳನ್ನು ಹೇಳಿದ್ದುಂಟು. ಸಂದರ್ಭಗಳು ತೀರ ಸರಳ ಮತ್ತು ಸಹಜವಾಗಿದ್ದು ಎಲ್ಲ ಕಡೆಗೂ ಪುನರಾವರ್ತಿಸುವುದು; ಜನತೆಯಿಂದ ಜನತೆಗೆ ಕಥೆಗಳು ಸ್ವೀಕೃತವಾಗುವುದು. ಅರ್ಧ ಶತಮಾನದ ತರುವಾಯ ಬಹುತೇಕವಾಗಿ ಪ್ರತಿಪಾದಿತವಾದ ಈ ತತ್ತ್ವಗಳನ್ನು ಗ್ರಿಮ್ ಸೋದರರೇ ಕಂಡುಕೊಂಡಿದ್ದು ಕಾಲದ ದೃಷ್ಟಿಯಿಂದ ಮಹತ್ತ್ವದಾಗಿದೆ. ಆದರೆ ಮೊದಲು ಎರಡು ಸಿದ್ಧಾಂತಗಳು ಮಾತ್ರ ಕ್ರಮೇಣ ಮನ್ನಣೆಯನ್ನು ಕಳೆದುಕೊಂಡುವು.

ಪಂಚತಂತ್ರದ ಕಥೆಗಳ ಉಗಮ ವಿಕಾಸಗಳನ್ನು ಕುರಿತ ಅಧ್ಯಯನದ ಫಲವಾಗಿ, ಬೆನ್ಫೆ ಜಗತ್ತಿನ ಎಲ್ಲ ಜನಪದ ಕಥೆಗಳೂ ವಲಸೆ ಹೋಗಿರಬೇಕೆಂಬ ನೂತನ ಸಿದ್ಧಾಂತಕ್ಕೆ ಬಂದ. ಈ ಕಥಾಪ್ರಸಾರ ಒಂದು ಕಡೆ ಇಸ್ಲಾಮಿಗಳಿಂದ ಮತ್ತೊಂದು ಕಡೆ ಬೌದ್ಧರಿಂದ ಆಗಿರಬೇಕೆಂದು ಅವನ ನಂಬಿಕೆ. ಹೀಗೆ ಯೂರೋಪಿನ ಎಲ್ಲ ಕಥೆಗಳಿಗೆ ಭಾರತೀಯ ಮೂಲವನ್ನು ಹೇಳುವಾಗ ಈಸೋಪನ ನೀತಿಕಥೆಗಳನ್ನು ಹೊರತುಪಡಿಸಿದುದು ಗಮನಿಸಬೇಕಾದ ಸಂಗತಿ. ಬೆನ್ಫೆಯ ಈ ಸಿದ್ಧಾಂತ ಕ್ರಮೇಣ ಲೋಕಪ್ರಸಿದ್ಧಿಯನ್ನು ಪಡೆದುಕೊಂಡಿತು. ಆದರೆ ತನ್ನಲ್ಲಿರುವ ಅಸಮರ್ಪಕತೆಯಿಂದ ನಿಲ್ಲಬಲ್ಲ ಸಿದ್ಧಾಂತವಾಗಿ ಉಳಿಯಲಿಲ್ಲ. ಅವನ ಸಿದ್ಧಾಂತವನ್ನು ಒಪ್ಪಲಿ ಬಿಡಲಿ, ಜನಪದ ಕಥೆಗಳ ತೌಲನಿಕ ಅಧ್ಯಯನದ ಪಿತಾಮಹನಾಗಿ ಅವನ ಹೆಸರು ಚಿರಸ್ಥಾಯಿಯಾಯಿತು.

ಜನಪದ ಕಥೆಗಳಲ್ಲಿ ಪುರಾತನ ಭಾವನೆಗಳು ಕಂಡುಬರುವುದರಿಂದ ಅವು ಪುರಾತನ ಕಾಲದ ಉಳಿಕೆಗಳು ಎಂಬುದಾಗಿ ಲ್ಯಾಂಗ್ ಅಭಿಪ್ರಾಯಪಡುತ್ತಾನೆ. ಕಥೆಗಳಲ್ಲಿನ ಸಾದೃಶ್ಯಗಳು ವಾಸ್ತವವಾಗಿ ಭಿನ್ನ ಪ್ರದೇಶಗಳ ಸ್ವತಂತ್ರ ಸೃಷ್ಟಿಯ ಫಲಗಳೆಂದು ಬಹುಬೇಗ ಪತ್ತೆಹಚ್ಚಿಕೊಂಡ

ಲ್ಯಾಂಗ್, ಕಥೆಗಳು ಪ್ರಾಚೀನ ಮಾನವನ ಸಂಪ್ರದಾಯ ಮತ್ತು ಪದ್ಧತಿಗಳಿಗನುಗುಣವಾಗಿ ರಚಿತವಾಗಿರುತ್ತವೆ ಎಂಬುದನ್ನು ಸಾರಿದ. ಸಮಾನ ಕಥೆಗಳಿಗೆ ಸಮಾನ ಸಂಸ್ಕøತಿಗಳೇ ಕಾರಣ ಎಂಬುದು ಇದರ ಒಟ್ಟು ಅಭಿಪ್ರಾಯ. ಮಾನವರೆಲ್ಲ ಸಮಾನವಾಗಿ ಯೋಚಿಸುತ್ತಾರೆ ಎಂಬುದು ಕಥೆಗಳ ಉಗಮ, ಪ್ರಸಾರಗಳಲ್ಲಿ ಸ್ಫೋಟಕ ಸತ್ಯವಾಯಿತು. ಪುರಾತನ ಮಾನವ ಭಾವನೆಗಳ ಮತ್ತು ಸಂಸ್ಕøತಿ ಸಮಾನತೆಗಳ ಮೇಲೆ ರಚಿತವಾದ ಈ ಸಿದ್ಧಾಂತ ಪಳೆಯುಳಿಕೆ ಸಿದ್ಧಾಂತವೆಂದು ಪ್ರಸಿದ್ಧವಾಗಿದೆ. ಹತ್ತೊಂಬತ್ತನೆಯ ಶತಕದ ಕಡೆಕಡೆಗೆ ಪ್ರಬಲವಾಗಿ ಕಾಣಿಸಿಕೊಂಡ ಇವನ ವಾದ ಜಾನಪದ ವಿದ್ವತ್ತಿನಲ್ಲಿ ಬಹಳ ಮುಖ್ಯವಾದುದೆಂದು ಪರಿಗಣಿತವಾಯಿತು. ಇವನ ಮೇಲೆ ಇಂಗ್ಲಿಷ್ ಮಾನವ ಶಾಸ್ತ್ರಜ್ಞರ ಪ್ರಭಾವ ಬಿದ್ದಿರಬೇಕು. ಹತ್ತೊಂಬತ್ತನೆಯ ಶತಕದ ಮಧ್ಯಭಾಗದ ಹೊತ್ತಿಗೆ ಕಾಣಿಸಿಕೊಂಡ ಮಾನವಶಾಸ್ತ್ರೀಯ ಪಂಥ ಪುರಾತನ ಮಾನವನ ಅಧ್ಯಯನದಲ್ಲಿ ತೊಡಗಿತ್ತು. ಈ ಪಂಥದಲ್ಲಿ ಪ್ರಮುಖನೆಂದರೆ ಇ.ಬಿ. ಟೆಯ್‌ಲರ್. ಈತನ ಸಂಶೋಧನೆಗಳು ಲಾಂಗನ ಮೇಲೆ ಪರಿಣಾಮವನ್ನುಂಟುಮಾಡಿರಬೇಕು. ಅಲ್ಲದೆ ಲ್ಯಾಂಗ್ ಕೂಡ ಮಾನವ ಶಾಸ್ತ್ರೀಯ ಪಂಥದ ಅನುಯಾಯಿ. ಪಳೆಯುಳಿಕೆ ಸಿದ್ಧಾಂತ ಮೂಲತಃ ಮಾನವಶಾಸ್ತ್ರದಲ್ಲಿ ಟೆಯ್‌ಲರನಿಂದ ಪ್ರಖ್ಯಾತಿಗೆ ಬಂದದ್ದು. ಇದನ್ನು ಪರಿಷ್ಕರಿಸಿ ಜಾನಪದಕ್ಕೆ ಅನ್ವಯಿಸಿದ್ದು ಲ್ಯಾಂಗನ ಕೀರ್ತಿ. ಈ ಸಿದ್ಧಾಂತವೂ ಮುಂದಿನವರಿಂದ ವಿಮರ್ಶಿತವಾಗಿ ಮಾರ್ಪಾಡು ಹೊಂದಿತು.

ಜನಪದ ಕಥೆಗಳಲ್ಲಿ ಕಾಣಬರುವ ಆಶಯಗಳು ಪುರಾತನ ಜೀವನದ ಉಳಿಕೆಗಳು ಮತ್ತು ಅನುಭವಗಳು ಎಂಬುದರ ಕಡೆಗೆ ಮಾನವಶಾಸ್ತ್ರಜ್ಞರು ಕೊಟ್ಟ ಲಕ್ಷ್ಯದ ಫಲವಾಗಿ ಜನಪದ ಕಥೆಯ ಉಗಮ ವಿಕಾಸದಲ್ಲಿ ಹೊಸ ಅಧ್ಯಾಯವೊಂದು ತೆರೆಯಿತು. ಈ ಸಂದರ್ಭದಲ್ಲಿ ಇಂಗ್ಲೆಂಡಿನಲ್ಲಿ ಹೊರಟ ಮಾನವ ಶಾಸ್ತ್ರೀಯ ಪಂಥ ಗಮನಾರ್ಹವಾದುದು. ಈ ಪಂಥದ ವಿದ್ವಾಂಸರು ಆಶಯಗಳ ಮೂಲಕ ಜನಪದ ಕಥೆಯ ಉಗಮ, ವಿಕಾಸಗಳನ್ನು ಅಧ್ಯಯನ ಮಾಡಿದರು. ಯೂರೋಪಿನ ಪುರಾತನ ಕಥೆಗಳಲ್ಲಿನ ಆಶಯಗಳ ಅಧ್ಯಯನದಿಂದ, ಹಲವಾರು ಕಥೆಗಳು ಗೊತ್ತಾದ ಪ್ರದೇಶಗಳಿಗೆ ಸೇರಿದ್ದು, ಸೀಮಿತ ವಿತರಣೆಯನ್ನು ಪಡೆದುಕೊಂಡಿರುತ್ತವೆ ಎಂಬುದನ್ನು ತಿಳಿಸಿದರು. ಆದರೆ ವರ್ಗವಾಗಲಿ, ಆಶಯಗಳಾಗಲಿ ತಮಗೆ ತಾವೇ ಪುರಾತನ ಸ್ವಭಾವವನ್ನು ವ್ಯಕ್ತಪಡಿಸುತ್ತವೆ ಎಂಬುದರಲ್ಲಿ ಇವರಿಗೆ ನಂಬಿಕೆಯಿರಲಿಲ್ಲ. ಅವುಗಳ ಶೋಧನೆಯಿಂದ ನಿಜವಾದ ಮೂಲವನ್ನು ಕಂಡು ಹಿಡಿಯಬೇಕಾಗಿದೆ ಎಂಬುದು ಅವರ ತಿಳಿವಳಿಕೆ.

ಜನಪದ ಕಥೆಯ ಉಗಮ, ವಿಕಾಸಗಳಲ್ಲಿ ಜಾನಪದ ಮತ್ತು ಮಾನವಶಾಸ್ತ್ರಗಳ ಪೂರಕ ಅಧ್ಯಯನ ಹೊಸ ಆಯಾಮವನ್ನು ಕಲ್ಪಿಸಿತು. ಪುರಾತನ ಕಥನದ ಈ ರೀತಿಯ ಅಧ್ಯಯನದಲ್ಲಿ ಪ್ರಖ್ಯಾತ ಹೆಸರೆಂದರೆ ಬೊಯಸ್‌ನದು. ಅಮೆರಿಕದ ಮಾನವಶಾಸ್ತ್ರೀಯ ಪಂಥದ ಮುಖ್ಯ ನೇತಾರನಾದ ಇವನ ಸಿದ್ಧಾಂತ ಕಥೆಗಳ ಬಹುಮೂಲಸಿದ್ಧಾಂತ ಎಂದು ಪ್ರಸಿದ್ಧವಾಗಿದೆ. ಹಲವು ಪ್ರತ್ಯೇಕ ಮೂಲಗಳಿಂದ ಜನಪದ ಕಥೆಗಳನ್ನು ಹುಡುಕುವುದೇ ಈ ಸಿದ್ಧಾಂತದ ಉದ್ದೇಶ. ಜನಪದ ಕಥೆಯನ್ನು ಕುರಿತಂತೆ ಬೊಯಸ್‌ನ ವಿಚಾರಗಳು ಅಧ್ಯಯನ ಯೋಗ್ಯವಾದವು. ಆತ ಮೊಟ್ಟಮೊದಲು ಜನಪದ ಕಥೆ ಮತ್ತು ಪುರಾಣಕ್ಕಿರುವ ಅಂತರವನ್ನು ಕಡಿಮೆಗೊಳಿಸಿದ. ಈಗ ಗೊತ್ತಾದ ಬುಡಕಟ್ಟಿನಲ್ಲಿ ಅಥವಾ ವರ್ಗದಲ್ಲಿ ಏನು ನಡೆಯುತ್ತಿದೆ ಎಂಬುದರ ಮೂಲಕ ಪ್ರಾಚೀನ ಕಾಲದಲ್ಲಿ ಏನು ನಡೆದಿತ್ತು ಎಂಬುದನ್ನು ಪತ್ತೆಹಚ್ಚಬಹುದೆಂದು ಬೊಯಸ್‌ನ ವಾದ. ಇವೆರಡರಲ್ಲಿಯೂ ಕಥನದ ಉಗಮಕ್ಕೆ ಮಾನವ ಜೀವನದ ಸಂಗತಿಗಳ ಕಲ್ಪನೆಗಳ ಕಾರ್ಯವೇ ಕಾರಣ. ಆದರೆ ಈ ಕಲ್ಪನೆಯ ಕಾರ್ಯ ಪರಿಮಿತವಾದುದು. ಆದ್ದರಿಂದ ಪ್ರತಿಯೊಂದು ಪ್ರವೃತ್ತಿಯೂ ನೂತನವಾದುದೊಂದನ್ನು ಕಂಡುಹಿಡಿಯುವುದಕ್ಕಿಂತ ಸಂಗ್ರಹಿತವಾದ ಹಳೆಯ ಕಲ್ಪನಾ ಘಟನೆಗಳನ್ನೇ ಇಟ್ಟುಕೊಂಡು ಕಾರ್ಯ ನಡೆಸುತ್ತದೆ ಎಂದು ಬೊಯಸ್ ಹೇಳಿದ. ಹೀಗೆ ಜನಪದ ಕಥೆಯ ಉಗಮ. ವಿಕಾಸಗಳ ಅಧ್ಯಯನದಲ್ಲಿ ಬೊಯಸ್‌ನದು ದೊಡ್ಡ ಹೆಸರಾಗಿದೆ.

ಪುರಾತನ ಜೀವನದ ಮತ್ತೊಂದು ಮುಖ್ಯವಾದ ಲಕ್ಷಣವೆಂದರೆ ಮತಸಂಬಂಧವಾದ ಕ್ರಿಯೆಗಳು. ಇದನ್ನೇ ದೃಷ್ಟಿಯಲ್ಲಿಟ್ಟುಕೊಂಡು ಕೆಲವರು ಜನಪದ ಕಥೆಗಳ ಉಗಮಕ್ಕೆ ಮತಧರ್ಮದ ಪ್ರಕ್ರಿಯೆಗಳನ್ನು ಕಾರಣವಾಗಿ ಒಡ್ಡಿದರು. ಪುರಾತನ ಧಾರ್ಮಿಕ ಮತಧರ್ಮದ ಪ್ರಕ್ರಿಯೆಗಳನ್ನು ಕಾರಣವಾಗಿ ಒಡ್ಡಿದರು. ಪುರಾತನ ಧಾರ್ಮಿಕ ಕ್ರಿಯೆಗಳ ಸಾಮಾನ್ಯವಾಗಿ ನಡೆಯುತ್ತಿದ್ದುದು ಸತ್ತವನು ಮತ್ತೆ ಎದ್ದು ಬರದಿರಲೆಂದು. ಈ ಸತ್ತಮನುಷ್ಯನಿಂದ (ದೆವ್ವ) ಹೆಚ್ಚು ತೊಂದರೆಯಾಗುತ್ತದೆಂದು ಅವರು ನಂಬಿಕೊಂಡಿದ್ದಿರಬೇಕು; ಇಲ್ಲವೆ, ಹಾಗೆ ಆಗುತ್ತಿದ್ದಿರಬೇಕು. ಆದ್ದರಿಂದ ಈ ಮತಾಚರಣೆಗಳನ್ನು ತಂದಿರಬೇಕೆಂದು ತೋರುತ್ತದೆ. ಎಲ್ಲ ಜನಪದ ಕಥೆಗಳಲ್ಲೂ ಇದನ್ನು ಕಾಣಬಹುದು. ಈ ಮತಾಚರಣೆ ಸಾರ್ವತ್ರಿಕವಾಗಿರವುದರಿಂದಲೇ ಆಶಯ ಕೂಡ ಸಾರ್ವತ್ರಿಕವಾಗಿರುತ್ತದೆ. ಸಾವಿನ ಬಗ್ಗೆ ಇದ್ದ ಭಯವೇ ಪ್ರಾಚೀನ ಮಾನವನಿಗೆ ದೆವ್ವದ ಅಥವಾ ರಾಕ್ಷಸನ ಕಥೆಗಳನ್ನು ಕಟ್ಟಿಕೊಳ್ಳಲು ಕಾರಣವಾಗಿದ್ದಿರಬೇಕು. ಹೀಗೆ ಪುರಾತನ ಮಾನವನ ನಂಬಿಕೆ, ನಡಾವಳಿ, ಸಂಪ್ರದಾಯ, ಮತಾಚರಣೆಗಳ ಮೂಲಕ ವಿಶ್ವದ ಕಥೆಗಳೆಲ್ಲದರ ಮೂಲ ಮತ್ತು ಸಾಮ್ಯವನ್ನು ಗುರುತಿಸಲು

ಹೊರಟವರೆಂದರೆ ನ್ಯೂಯಮನ್ ಮತ್ತು ಜೆನ್ನೇಪರು. ವಾಸ್ತವವಾಗಿ ಏನು ನಡೆದಿತ್ತು ಎಂಬುದಕ್ಕಿಂತ ಕಲ್ಪಿತ ವಿಷಯವೇ ಇಲ್ಲಿ ಹೆಚ್ಚಾಗಿರುವುದರಿಂದ ಈ ವಾದ ದೋಷದಿಂದ ತುಂಬಿಕೊಂಡಿದೆ.

**ಜಾನಪದ ಕಥೆಗಳ ಆರಂಭದ ಕೆಲವು ಸೂತ್ರಗಳು:-**

ಸಾಮಾನ್ಯವಾಗಿ ಜನಪದ ಕಥೆಗಳು ಆರಂಭವಾಗುವುದು-ಒಂದಾನೊಂದು ಕಾಲದಲ್ಲಿ ಎಂದು. ಅಷ್ಟಷ್ಟಕ್ಕೆ ಒಂದು ಪಟ್ಟಣ, ಆ ಪಟ್ಟಣದಲ್ಲಿ ಒಬ್ಬ ರಾಜ. ಆ ರಾಜನಿಗೊಬ್ಬ ರಾಣಿ; ಒಂದಾನೊಂದು ಕಾಲದಲ್ಲಿ ಒಂದಾನೊಂದು ಊರಿನಲ್ಲಿ ಒಬ್ಬ ದೊರೆಯಿದ್ದ; ಒಂದು ಊರು, ಆ ಊರಿನಲ್ಲಿ ಒಬ್ಬ ರಾಜ, ಅವನಿಗೆ ಮಕ್ಕಳಿರಲಿಲ್ಲ-ಇವು ಆರಂಭದ ಕೆಲವು ಸೂತ್ರಗಳು. ಕಥೆಯ ಆರಂಭದಲ್ಲಿ ರಾಜರಾಣಿಯರ ಪ್ರಸ್ತಾಪ ಬಂದು ಅವರಿಗೆ ಮಕ್ಕಳಿರಲಿಲ್ಲವೆಂದು ಹೇಳುವುದು ಜನಪದ ಕಥೆಗಳ ಒಂದು ಸಾಮಾನ್ಯ ಲಕ್ಷಣ. ಕೆಲವು ಸಾರಿ ವಿಸ್ತೃತ ಸೂತ್ರಗಳೂ ಕಾಣಬರುವುದುಂಟು. ಆರಂಭದ ಒಂದಾನೊಂದು ಕಾಲದಲ್ಲಿ ಎಂಬ ಭಾವನೆ ಇನ್ನೂ ಹೆಚ್ಚು ಬೆಳವಣಿಗೆಯನ್ನು ಪಡೆದಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಇದಲ್ಲದೆ ವ್ಯಕ್ತಿಗಳ ಮತ್ತು ಅವರು ವಾಸಿಸುವ ಸ್ಥಳಗಳ ಹೆಸರುಗಳಿಂದಲೂ ಕಥೆಗಳು ಪ್ರಾರಂಭವಾಗುತ್ತವೆ. ಉದಾಹರಣೆಗಾಗಿ, ಚಂದ್ರಾವತಿ ಅನ್ನುವುದು ಒಂದು ಪಟ್ಟಣ. ಅಲ್ಲಿಗೆ ಚಂದ್ರಶೇಖರರಾಯ ಅನ್ನುವವನು ಒಬ್ಬ ದೊರೆ-ಎಂಬುದನ್ನು ನೋಡಬಹುದು. ಆರಂಭದ ಇಂಥ ನಮೂನೆ ದಕ್ಷಿಣ ಅಮೆರಿಕದ ಈಶಾನ್ಯ ತೀರಪ್ರದೇಶಗಳಲ್ಲಿ ಪ್ರಚಲಿತವಾಗಿರುವ ಪುರಾಣಕಥೆಗಳಲ್ಲಿಯೂ ಕಾಣಬರುವುದುಂಟು. ಆದರೆ ಒಂದು ಮಾತು ಮಾತ್ರ ಸತ್ಯ. ಉಲ್ಲೇಖಿತ ಹೆಸರುಗಳಿಂದ ಆರಂಭವಾಗುವುದು ಪುರಾಣಕಥೆಗಳಲ್ಲಿ ಸಹಜವಾದುದಾದರೂ ಶುದ್ಧ ಜನಪದಕಥೆಗಳಲ್ಲಿ ಅಲ್ಲವೆನಿಸುತ್ತದೆ. ಹೀಗೆ ಹೆಸರುಗಳು ಕಾಣಿಸಿಕೊಳ್ಳುವುದಕ್ಕೆ ಸಾಹಿತ್ಯಿಕ ಕಥೆಯ ಸಂಪರ್ಕ ಅಥವಾ ಪ್ರಭಾವವೇ ಕಾರಣವಾಗಿರಬೇಕು. ಆದ್ದರಿಂದ ಈ ಮಾದರಿಯ ಆರಂಭ ಶುದ್ಧ ಜನಪದಕಥೆಗಳ ಜಾಯಮಾನವಲ್ಲ ಎಂದು ಹೇಳಬಹುದು. ಇನ್ನು ಕೆಲವು ಸಾರಿ ಕಥೆ ಹೇಳುವವರು ತಮ್ಮ ವೈಯಕ್ತಿಕ ಪರಿಸರಕ್ಕೆ ಕಥೆಯ ಆರಂಭವನ್ನು ಪಳಗಿಸಿಕೊಳ್ಳುವುದುಂಟು.

ನಮ್ಮೂರಂತೋದು ಒಂದೂರು, ನನ್ನಂತೋಳು ಒಬ್ಬ ಬಡವೆ; ಸಂಜೀವ್ನೂ ಸಂಜೀವ್ನ ಹೆಂಡ್ತಿ ಸಿದ್ದಿಯೂ ಪೀಹಳ್ಳಿಯಲ್ಲಿ ಕೂಲಿ ಮಾಡ್ಕಂಡಿದ್ರು-ಇವು ಅಂಥ ಕೆಲವು ಉದಾಹರಣೆಗಳು. ಕಥಾವಕ್ತೃ ತನ್ನನ್ನೊ ತನ್ನ ಊರನ್ನೊ ಅಥವಾ ತನ್ನ ಸಮಕಾಲೀನರಾದ ಮತ್ತಾರನ್ನೊ

ಬಳಸಿಕೊಂಡು ಹೇಳುವುದನ್ನು ಮೇಲಿನ ನಿದರ್ಶನಗಳಿಂದ ಗುರುತಿಸಬಹುದು. ಊರು, ರಾಜ, ರಾಣಿ ಮುಂತಾದ ಮಾತುಗಳು ಸಾರ್ವತ್ರಿಕ ಅರ್ಥದಲ್ಲಿ ಬಳಕೆಯಾಗುತ್ತಿದ್ದು ಅವುಗಳ ಬದಲು ಇನ್ನಾವ ಹೆಸರನ್ನೇ ಸೇರಿಸಿದರೂ ಒಟ್ಟು ಕಥಾರಚನೆಯಲ್ಲಿ ವ್ಯತ್ಯಾಸವೇನೂ ಕಾಣಬರದಿರುವುದು ಇದಕ್ಕೆ ಕಾರಣವಾಗಿದೆ. ಅಂತೂ ಕಥೆ ಹೇಳುವವರು ಕಥೆ ಹೇಳುವ ಧಾಟಿಯಲ್ಲಿ ಮಾಡಿಕೊಳ್ಳುವ ವ್ಯತ್ಯಾಸ ಇದು. ಇಂಥ ಸಂದರ್ಭಗಳು ತೀರ ಅಪರೂಪ. ಮೇಲಿನ ವಿವೇಚನೆಯಿಂದ, ಕಥೆಯ ಆರಂಭ ಕೆಲವು ಸೂತ್ರಗಳ ಮೂಲಕವೇ ಆಗುತ್ತದೆ ಎಂಬುದನ್ನು ಸ್ಥಿರಪಡಿಸಿದಂತಾಯಿತು.

**ಕಥೆಗಳ ಮುಕ್ತಾಯ:-**

ಕಥೆಗಳ ಸೂತ್ರಬದ್ಧ ಆರಂಭದಂತೆ ಸೂತ್ರಬದ್ಧ ಮುಕ್ತಾಯವೂ ಪದೇ ಪದೇ ಕಾಣಿಸಿಕೊಳ್ಳುತ್ತದೆ. ಅಲ್ಲದೆ, ಆರಂಭಕ್ಕಿಂತ ಮುಕ್ತಾಯ ಹೆಚ್ಚು ವೈವಿಧ್ಯವನ್ನು ತೋರಿಸುತ್ತಿದ್ದು, ವಿವರವಾದ ಅಧ್ಯಯನಕ್ಕೆ ವಸ್ತುವಾಗಿದೆ. ಆಮೇಲೆ ಅವರು ಸುಖವಾಗಿ ಬಾಳ್ತಾರೆ; ಹೀಗೆ ಅವರು ಬಹಳ ಕಾಲ ಸುಖದಿಂದಿದ್ದರು; ಅವರು ಅಲ್ಲಿ ಸುಖವಾಗಿದ್ದಾರೆ, ನಾವು ಇಲ್ಲಿದ್ದೇವೆ; ಅವ್ರು ಬಾಳ್ ಬಾಳ್ತಾ ಅಲ್ಲವ್ರೆ, ನಾವು ಬಳ್ಳೆಸೊಪ್ಪಿಗೆ ಬೆಳ್ಳುಳ್ಳಿ ಇಲ್ದೆ ಇಲ್ಲಿವಿ__ಇವು ಮುಕ್ತಾಯದ ಸೂತ್ರಗಳು. ಇಲ್ಲಿಗೆ ಕಥೆ ಮುಗಿಯಿತು__ಎಂಬುದು ಸಾಮಾನ್ಯವಾಗಿ ಸಾರ್ವತ್ರಿಕವಾದ ಮುಕ್ತಾಯದ ಸೂತ್ರವೆನಿಸುತ್ತದೆ. ಆದರೆ ಕೆಲವು ಸಾರಿ ಕಥೆ ಮುಗಿದ ಕೂಡಲೆ, ಬೇರೊಂದು ಕಥೆ ಹೇಳು ಎಂದು ಕೇಳುವುದರ ಮೂಲಕ ಕೇಳಿದವರ ಹೆಸರು, ಹೇಳಿದವರ ಹೆಸರು ಮುಂತಾದವುಗಳಿಂದ ಕಥೆ ಮುಂದೆ ಸಾಗುತ್ತದೆ. ಬೃಹತ್ ಕಥೆ, ಪಂಚತಂತ್ರ, ಬೇತಾಳಪಂಚವಿಂಶತಿ ಮೊದಲಾದ ಸಾಹಿತ್ಯಿಕ ಕಥೆಗಳಲ್ಲಿ ಇದನ್ನು ಕಾಣಬಹುದು. ಇವುಗಳ ಕಥಾತಂತ್ರವನ್ನೇ ಹಾಗೆ ನಿಯೋಜಿಸಲಾಗಿದೆ.

ಜನಪದ ಕಥೆಗಳ ಮುಕ್ತಾಯ ಸಾಮಾನ್ಯವಾಗಿ ಸುಖಾಂತ, ಅದರಲ್ಲೂ ಮದುವೆಯ ಉತ್ಸವದಲ್ಲಿ. ಆದ್ದರಿಂದ ವಿಶೇಷವಾಗಿ ನೆನೆಯಬಹುದಾದ ಕಥೆಯ ಮುಕ್ತಾಯದ ಸೂತ್ರವಿವರಣೆಯೆಂದರೆ ಮದುವೆಯ ಸಂಭ್ರಮದಲ್ಲಿ ಕಡೆಯಾಗುವುದೇ ಆಗಿದೆ. ಉದಾಹರಣೆಗೆ, ಕೊಟ್ಟಣ ಕುಟ್ಟಿಸಿ, ಪಟ್ಟಣ ಸಾರಿಸಿ, ಕಾಣದವರಿಗೆ ವಾಲೆ ಬರೆದು, ಕಂಡವರಿಗೆ ಕರಪತ್ರ ಕೊಟ್ಟು ಕಳಿಸಿ, ಉಘೇ ಅಂತ ಮದುವೆ ಮಾಡ್ಕೊಂಡು ಸುಖವಾಗಿದ್ದ__ಎಂಬ ವಿವರಣಾತ್ಮಕ ಸೂತ್ರವನ್ನು ನೋಡಿ. ಕೆಲವು ಸಾರಿ ಈ ಸಂಭ್ರಮದಲ್ಲಿ ಕಥಾವಕ್ತೃ ಕೂಡ ಪ್ರತಿನಿಧಿಯಾಗಿದ್ದನೊ ಎನ್ನಿಸುವಂತೆ

ಸಾಕ್ಷಾತ್ತಾದ ಚಿತ್ರಣ ಮೈದುಂಬಿ ನಿಲ್ಲಬಹುದು. ಮುಕ್ತಾಯದಲ್ಲೂ ವಿಸ್ತೃತ ಸೂತ್ರಗಳು ಕಾಣಬರುವುದನ್ನು ಮೇಲಿನ ನಿದರ್ಶನದಿಂದ ಶ್ರುತಪಡಿಸಬಹುದು. ಈ ಸಂದರ್ಭದಲ್ಲಿ ಕಥೆಗಳು ಈ ಯಾವುದೇ ಸೂತ್ರಗಳಿಲ್ಲದೆ ಇದ್ದಕ್ಕಿದ್ದ ಹಾಗೆ ಮುಕ್ತಾಯವಾಗುವ ಕೆಲಮಟ್ಟಿನ ಸಾಧ್ಯತೆಯನ್ನೂ ನಿರಾಕರಿಸುವಂತಿಲ್ಲ. ಕೆಲವು ವೇಳೆ ಕಥಾವಕ್ತೃ ಕೇಳುಗನಲ್ಲಿ ಆಸಕ್ತಿಯನ್ನು ಕೆರಳಿಸುವುದಕ್ಕಾಗಿ ಕಥೆಯನ್ನು ಇದ್ದಕ್ಕಿದಂತೆ ನಿಲ್ಲಿಸುವುದುಂಟು. ಆಗ ಕೇಳುಗನ ಪ್ರಶ್ನೆ, ಅನಂತರ ವಕ್ತೃವಿನ ಉತ್ತರ-ಹೀಗೆ ಕಥೆ ನಡೆಯುತ್ತದೆ. ಇಲ್ಲಿ ಕಥೆ ಅವಶ್ಯವಾಗಿ ಕ್ರೀಡೆಯಾಗಿ ಬಿಡುತ್ತದೆ. ಕಥೆಗಳ ಕಡೆಯಲ್ಲಿ ಶುಭಕಾಮನೆ, ಮತ್ತೊಂದು ಕಥೆ ಹೇಳುವಂತೆ ಪ್ರಾರ್ಥನೆ, ಕಥೆಯನ್ನು ಕಲಿತದ್ದೆಲ್ಲಿ ಎಂಬುದರ ವಿಚಾರಣೆ-ಇವುಗಳಿಂದ ಮುಕ್ತಾಯವಾಗುವುದು ಅಪರೂಪ. ಈ ಸಮಯದಲ್ಲಿ ನೆನೆಯಬಹುದಾದ ಮತ್ತೊಂದು ವಿಷಯವೆಂದರೆ, ಕಥೆಯ ಮಧ್ಯದಲ್ಲಿ ಕಥಾವಕ್ತೃ ಆಸಕ್ತಿಯಿಂದ ಶ್ರೋತೃಗಳನ್ನು ಕುರಿತು ಕೇಳುವ ಪ್ರಶ್ನೆ; ಶ್ರೋತೃಗಳು ತಾವು ಕೇಳಿದ್ದನ್ನು ಖಾಯಂಗೊಳಿಸುವ ದೃಷ್ಟಿಯಿಂದ ಮಾಡುವ ಹೂಂಗುಟ್ಟುವಿಕೆ.

ಇನ್ನೊಂದು ವಿಚಾರ. ಸ್ಥಳಪುರಾಣದ ಕಥೆ ಆ ಸ್ಥಳದ, ಗ್ರಾಮದೇವತೆಯ ಹಾಗೂ ಇನ್ನಾರದೊ ಪ್ರಚಲಿತರ ಹೆಸರುಗಳಿಂದ ಆರಂಭವಾಗುತ್ತದೆ; ನಂಬಿ ಬಂದ ಆಚಾರವಿಚಾರಗಳ ಪದ್ಧತಿ ಸಂಪ್ರದಾಯಗಳ ವಿವರಣೆಯೊಡನೆ ಮುಕ್ತಾಯವಾಗುತ್ತದೆ. ಇದಲ್ಲದೆ, ನೀತಿಕಥೆಗಳು (ಕೆಲವು ಸಾರಿ ಪ್ರಾಣಿಕಥೆಗಳು) ಅಂತ್ಯದಲ್ಲಿ ಸೂತ್ರಬದ್ಧವಾದ ನೀತಿವಾಕ್ಯವೊಂದರಿಂದ ಮುಕ್ತಾಯವಾಗುವುದೂ ಸಹಜವಾಗಿದೆ. ಕಾಗೆಯನ್ನು ಮೋಸಮಾಡುವ ನರಿ, ಸಿಂಹವನ್ನು ಬಾವಿಗೆ ಕೆಡವಿದ ಮೊಲ__ಇಂಥ ಕಥೆಗಳನ್ನು ಉದಾಹರಿಸಬಹುದು.

**ಉಪಸಂಹಾರ:-**

ಹೀಗೆ ಜನಪದ ಕಥೆಯ ಆರಂಭ ಮತ್ತು ಮುಕ್ತಾಯ ಸೂತ್ರ ಬದ್ಧ ನೆಲಗಟ್ಟಿನ ಮೇಲೆ ರೂಪಿತವಾಗಿದೆ. ಕಥಾಸೂತ್ರವನ್ನು ಕುರಿತಾದ ಆಲೋಚನೆಯಲ್ಲಿ ಸೂತ್ರ ಕಥೆ ಮತ್ತು ಸಂಚಿತಕಥೆ ಎಂಬೆರಡು ಪ್ರಕಾರಗಳನ್ನು ಆಸಕ್ತಿಯಿಂದ ಅವಲೋಕಿಸಬಹುದು. ಒಂದೇ ಘಟನೆ, ಪದ್ಯ ಅಥವಾ ನುಡಿಗಟ್ಟುಗಳು ಪುನರಾವರ್ತನೆಗೊಳ್ಳುವ ಏಕರೀತಿಯ ಘಟನಾವಳಿಗಳನ್ನು ಚಿತ್ರಿಸುವ ಕಥೆ ಸೂತ್ರಕಥೆಯೆನಿಸುತ್ತದೆ. ಕಥೆಯಲ್ಲಿ ಏನು ನಡೆಯುತ್ತದೆ ಎಂಬುದು ಇಲ್ಲಿ ಮುಖ್ಯವಲ್ಲ. ಅದನ್ನು ಯಾವ ರೀತಿಯಲ್ಲಿ ಹೇಳಿದೆ ಎಂಬುದು ಇಲ್ಲಿ ಗಮನಾರ್ಹ. ಆದ್ದರಿಂದ ಚಮತ್ಕಾರವೇ ಇಲ್ಲಿ ಮುಖ್ಯವಾಗಿ ಬಿಡುತ್ತದೆ. ಇನ್ನೂ ಸ್ಪಷ್ಟವಾದ ಪ್ರಕಾರವೆಂದರೆ ಸಂಚಿತಕಥೆ. ಘಟನೆ ಅಥವಾ

ನುಡಿಗಳ ಪುನರಾವರ್ತನೆಗಳ ಸಂಚಯವೇ ಇದು. ಈ ಘಟನಾಸರಣಿಗಳು ನಿಯತಸೂತ್ರದ ಮೇಲೆ ಬಂಧಿತವಾಗಿರುತ್ತವೆ. ಸಂಭಾಷಣೆಗಳ ಮೂಲಕ ವಿವರಗಳು ಬೆಳೆಯುತ್ತ ಹೋಗುತ್ತವೆ. ಪ್ರತಿಯೊಂದು ಘಟನೆಯೊಡನೆಯೂ ಈ ಸಂಚಯ ಕಾರ್ಯ ನಡೆಯುವುದಲ್ಲದೆ, ಪ್ರತಿ ಘಟನೆಯೂ ಹಿಂದಿನ ಘಟನೆಯನ್ನು ಅವಲಂಬಿಸಿರುತ್ತದೆ. ಕೆಲವು ಸಾರಿಯ ಇಂಥ ಅಸಂಬದ್ಧ ಸೇರಿಕೆ ಮನೋರಂಜನೆಯ ವಸ್ತುವಾಗುತ್ತದೆ.

ಸೂತ್ರಕಥೆ ಮತ್ತು ಸಂಚಿತ ಕಥೆಗಳೆರಡರಲ್ಲೂ ಕಾಣಬರುವ ಮೊದಲ ಗುಣವೆಂದರೆ ಪುನರಾವರ್ತನೆ; ಸಾಮಾನ್ಯವಾಗಿ ಇದು ನಿರಂತರ ಸಂಕಲನಗಳ ಮೂಲಕ ಆದುದು. ಇವೆರಡರಲ್ಲಿಯೂ ಕಥಾರೂಪವೇ ಪ್ರಧಾನವಾದುದು. ಬಹುಸಾರಿ ಇವುಗಳ ಕಥೆ ಕ್ರೀಡೆಯಾಗಿ ಬಿಡುತ್ತದೆ. ಹೀಗೆ ಸೂತ್ರಾತ್ಮಕವಾಗಿ ಸಾಗುವುದರಿಂದ ಇವನ್ನಿಲ್ಲಿ ನೆನೆಯಬಹುದು.

**ಆಕರ ಗ್ರಂಥಗಳು :-**


1. ಜಾನಪದ ಸ್ವರೂಪ — ಡಾ. ಹಾ.ಮಾ. ನಾಯಕ
2. ಜಾನಪದ ಕಥನ — ಡಾ. ಎಚ್. ಟಿ. ಪೋತೆ
3. ಜಾನಪದ ಅಧ್ಯಯನ — ದೆ. ಜವರೇ ಗೌಡ
4. ಜಾನಪದ ಮುನ್ನೋಟ — ಡಾ. ಪಿ.ಕೆ ಖಂಡೋಬಾ
5. ಅಂತರಜಾಲ

A

# “ಸಾಹಿತ್ಯ ಕ್ಷೇತ್ರಕ್ಕೆ ಕುವೆಂಪು ಅವರು ನೀಡಿದ ಕೊಡುಗೆ”

*Submitted to the*

**H.K.E. Society’s**

**A. V. PATIL ARTS, SCIENCE & COMMERCE COLLEGE ALAND"**

## Submitted By

1. Mahesh Prakash
2. Satish Vithal
3. Shambhuling Maruti
4. Shivaraj Parameshwar
5. Sanjukumar Vithal

*Under the guidance of*

**Prof. B.S Kage**
Assistant Professor

**Department of Kannada**
**A V Patil Arts, Science & Commerce College Aland"**
**2021-22**

H.K.E. SOCIETY'S
A. V. PATIL ARTS, SCIENCE & COMMERCE COLLEGE
ALAND

## CERTIFICATE OF COMPLETION

This is to certify that the Project Report on "ಸಾಹಿತ್ಯ ಕ್ಷೇತ್ರಕ್ಕೆ ಕುವೆಂಪು ಅವರು ನೀಡಿದ ಕೊಡುಗೆ" AT HKES'S A. V. PATIL ARTS, SCIENCE & COMMERCE COLLEGE, ALAND " is based on the project carried out under the guidance of Prof. B.S Kage and submitted to the Department of Kannada H.K.E. Society's A V Patil Arts, Science & Commerce College Aland.

**SUBMITTED BY :**

1. Mahesh Prakash
2. Satish Vithal
3. Shambhuling Maruti
4. Shivaraj Parameshwar
5. Sanjukumar Vithal

**GUIDE** **HOD** **PRINCIPAL**

ಮುಖ್ಯಸ್ಥರು
ಕನ್ನಡ ವಿಭಾಗ
ಹೈ.ಕ.ಶಿ. ಸಂಸ್ಥೆಯ. ಎ.ವ್ಹಿ. ಪಾಟೀಲ
ಮಹಾವಿದ್ಯಾಲಯ, ಆಳಂದ

PRINCIPAL
H.K.E. Society's
A.V. Patil Degree College
ALAND-585 302, Dist. Kalaburagi

**DATE:**

**PLACE : ALAND**

# ACKNOWLEDGEMENTS

It is my pleasure to express my sincere gratitude to all those who have given guidance and support in completion of this dissertation report. I wish to express my sincere thanks to Prof. B.S Kage Assistant Professor and Head of Department of Kannada for his encouragement which helped in accomplishment of this study.

I wish to express my sincere heartfelt gratitude to Prof. B. S Kage Assistant Professor and department of Kannada for the constant guidance and support in all areas. Without her guidance the outcome of this report would not have been so successful.

# ಪರಿವಿಡಿ


ಪ್ರಮಾಣ ಪತ್ರ

ಘೋಷಣಾ ಪತ್ರ

ಅರಿಕೆ

ಪೀಠಿಕೆ

1. ಅಧ್ಯಯನದ ಗುರಿ ಮತ್ತು ಉದ್ದೇಶಗಳು
2. ಕುವೆಂಪು ಅವರ ಬಾಲ್ಯ ಜೀವನ
3. ಶಿಕ್ಷಣ
4. ವೃತ್ತಿ ಜೀವನ
5. ವೈವಾಹಿಕ ಜೀವನ
6. ಸಾಹಿತ್ಯ ಕೃಷಿ
7. ನಿಧನ
8. ನುಡಿ ನಮನ (ಕುವೆಂಪು ಕುರಿತು ಇತರ ಸಾಹಿತಿಗಳ ಅಭಿಪ್ರಾಯ)
9. ಸ್ಮಾರಕಗಳು
10. ಉಪಸಂಹಾರ
11. ಆಕರ ಗ್ರಂಥಗಳು

**ಪೀಠಿಕೆ:-**

ಕುವೆಂಪು, ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ (ಡಿಸೆಂಬರ್ ೨೯, ೧೯೦೪[೧] - ನವೆಂಬರ್ ೧೧, ೧೯೯೪), ಕನ್ನಡದ ಅಗ್ರಮಾನ್ಯ ಕವಿ, ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಮತ್ತು ಚಿಂತಕರಾಗಿದ್ದರು.

ಇಪ್ಪತ್ತನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ವರಕವಿ ಬೇಂದ್ರೆಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡವರು. ವಿಶ್ವಮಾನವ ಸಂದೇಶ ನೀಡಿದವರು. ಕನ್ನಡದ ಎರಡನೆಯ 'ರಾಷ್ಟ್ರಕವಿ. ಜ್ಞಾನಪೀಠ ಪ್ರಶಸ್ತಿಯನ್ನೂ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಕರ್ನಾಟಕ ಸರ್ಕಾರ ಕೊಡಮಾಡುವ ಕರ್ನಾಟಕ ರತ್ನ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿಗಳನ್ನು ಮೊದಲ ಬಾರಿಗೆ ಪಡೆದವರು.

## ಅಧ್ಯಯನದ ಗುರಿ ಮತ್ತು ಉದ್ದೇಶಗಳು

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ, ಕುವೆಂಪು ಎಂದು ಪ್ರಸಿದ್ಧರಾದ ಇವರು, ಭಾರತೀಯ ಕವಿ, ನಾಟಕಕಾರ, ಕಾದಂಬರಿಕಾರ ಮತ್ತು ವಿಮರ್ಶಕ. ಅವರು 20 ನೇ ಶತಮಾನದ ಅತ್ಯುತ್ತಮ ಕನ್ನಡ ಕವಿ ಎಂದು ಅನೇಕರು ಪರಿಗಣಿಸಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡದ ಮೊದಲ ಸಾಹಿತಿಯೂ ಹೌದು. ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಮ್ಮ ಶಿಕ್ಷಣವನ್ನು ಪೂರ್ಣಗೊಳಿಸಿದರು, ನಂತರ ಅವರು ಶಿಕ್ಷಕರಾಗಿ ಕೆಲಸ ಮುಂದುವರೆಸಿದರು. ಈ ಸಮಯದಲ್ಲಿ, ಅವರು ಹಲವಾರು ಸಾಹಿತ್ಯ ಕೃತಿಗಳಿಗೆ ಕೊಡುಗೆ ನೀಡಿದರು. ಪ್ರಸಿದ್ಧ ಹಿಂದೂ ಮಹಾಕಾವ್ಯ ರಾಮಾಯಣವನ್ನು ಆಧರಿಸಿದ ಮಹಾಕಾವ್ಯ 'ಶ್ರೀ ರಾಮಾಯಣ ದರ್ಶನಂ' ಮತ್ತು 'ಕಾನೂರು ಹೆಗ್ಗಡಿತಿ' ನಂತಹ ಕಾದಂಬರಿಗಳು ಅವರ ಅತ್ಯುತ್ತಮ ಕೃತಿಗಳಲ್ಲಿ ಸೇರಿವೆ.

ಅವರು ಕರ್ನಾಟಕ ರಾಜ್ಯ ಗೀತೆ 'ಜಯ ಭಾರತ ಜನನಿಯ ತನುಜಾತೆ' ಬರೆದ ಕೀರ್ತಿಗೆ ಭಾಜನರಾಗಿದ್ದಾರೆ. ಅವರ ಜೀವನದುದ್ದಕ್ಕೂ ಅವರು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಪದ್ಮಭೂಷಣ ಮತ್ತು ಪದ್ಮವಿಭೂಷಣ ಸೇರಿದಂತೆ ಹಲವಾರು ಗೌರವಗಳನ್ನು ಪಡೆದರು, ಭಾರತದ ಮೂರನೇ ಮತ್ತು ಎರಡನೇ ಅತ್ಯುನ್ನತ ನಾಗರಿಕ ಗೌರವಗಳು.

**ಬಾಲ್ಯ ಜೀವನ :-**

ಕುವೆಂಪುಅವರುತಮ್ಮತಾಯಿಯತವರೂರಾದ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆ ಎಂಬಲ್ಲಿ ಡಿಸೆಂಬರ್ ೨೯, ೧೯೦೪ ರಲ್ಲಿ ಜನಿಸಿದರು.[೨] ತಂದೆ ವೆಂಕಟಪ್ಪ; ತಾಯಿ ಸೀತಮ್ಮ. ಅವರ ಬಾಲ್ಯ ತಮ್ಮ ತಂದೆಯ ಊರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿಯಲ್ಲಿ ಕಳೆಯಿತು.

**ಶಿಕ್ಷಣ:-**

ಕುವೆಂಪು ಅವರ ಆರಂಭಿಕ ವಿದ್ಯಾಭ್ಯಾಸ ಕೂಲಿಮಠದಲ್ಲಿ ಆಯಿತು. ಮಾಧ್ಯಮಿಕ ಶಿಕ್ಷಣ ತೀರ್ಥಹಳ್ಳಿಯಲ್ಲಿ ನಡೆಯಿತು. ನಂತರ ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ತಮ್ಮ ಶಿಕ್ಷಣ ಮುಂದುವರಿಸಿದರು.[೩] ಮೈಸೂರಿನ ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿಯನ್ನೂ, ಕನ್ನಡದಲ್ಲಿ ಎಂ. ಎ. ಪದವಿಯನ್ನೂ ಪಡೆದರು. ಟಿ. ಎಸ್. ವೆಂಕಣ್ಣಯ್ಯನವರು ಇವರಿಗೆ ಗುರುಗಳಾಗಿದ್ದರು.

**ವೃತ್ತಿಜೀವನ**

ಕುವೆಂಪು ಅವರು ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರೂ, ಪ್ರಾಂಶುಪಾಲರೂ ಆಗಿದ್ದರು. ನಂತರ ಉಪಕುಲಪತಿಗಳಾದರು[೪]. ತಮ್ಮ ಕಲ್ಪನೆಯ ಕೂಸಾದ ಮಾನಸ ಗಂಗೋತ್ರಿಯನ್ನು ಕಟ್ಟಿ ಬೆಳೆಸಿದರು. ವಿಶ್ವವಿದ್ಯಾನಿಲಯವನ್ನು ಅಧ್ಯಯನಾಂಗ, ಸಂಶೋಧನಾಂಗ ಹಾಗೂ ಪ್ರಸಾರಾಂಗ ಎಂಬುದಾಗಿ ವಿಭಾಗಿಸಿದರು. ಕಡಿಮೆ ಅವಧಿಯಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆಸಿ ಕನ್ನಡ ಮಾಧ್ಯಮದ ತರಗತಿಗಳನ್ನು ಆರಂಭಿಸಿದರು.

**ವೈವಾಹಿಕ ಜೀವನ**

ಕುವೆಂಪು ಅವರು ಹೇಮಾವತಿ ಅವರನ್ನು ವಿವಾಹವಾದರು. ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯ ಚೈತ್ರ, ಇಂದುಕಲಾ ಹಾಗೂ ತಾರಿಣಿ ಅವರ ಮಕ್ಕಳು. ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡದ ಅಗ್ರಮಾನ್ಯ ಸಾಹಿತಿಗಳಲ್ಲಿ ಒಬ್ಬರಾಗಿದ್ದಾರೆ. ಕೋಕಿಲೋದಯ ಚೈತ್ರ ಅವರು ಇಂಜಿನಿಯರ್ ಆಗಿ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದಾರೆ. ಚಿದಾನಂದಗೌಡ ಅವರು ಕುವೆಂಪು ಅವರ ಅಳಿಯ.

**ಸಾಹಿತ್ಯಕೃಷಿ :-**

ಕುವೆಂಪು ಅವರು 20ನೆಯ ಶತಮಾನ ಕಂಡ ದೈತ್ಯ ಪ್ರತಿಭೆ. ಅವರೊಬ್ಬ ರಸಋಷಿ. ತಮ್ಮ ಮೇರು ಕೃತಿ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಈ ಕಾಲಕ್ಕೆ ಅಗತ್ಯವಾದ ದರ್ಶನವನ್ನು ನೀಡಿದ್ದಾರೆ. ಅವರ ಎರಡು ಬೃಹತ್ ಕಾದಂಬರಿಗಳಾದ 'ಕಾನೂರು ಹೆಗ್ಗಡತಿ' ಹಾಗೂ 'ಮಲೆಗಳಲ್ಲಿ ಮದುಮಗಳು' ಅವರನ್ನು ಜಗತ್ತಿನ ಮಹಾನ್ ಕಾದಂಬರಿಕಾರರ ಸಾಲಿನಲ್ಲಿ ನಿಲ್ಲುವಂತೆ ಮಾಡಿವೆ. ಅವರ ನಾಟಕಗಳಿಗೆ ವೈಚಾರಿಕತೆಯ ಸ್ಪರ್ಶವಿದೆ.

**ಕೃತಿಗಳು:-**

**ಮಹಾಕಾವ್ಯ**

1. ಶ್ರೀ ರಾಮಾಯಣ ದರ್ಶನಂ (1949)

**ಖಂಡಕಾವ್ಯಗಳು**

1. ಚಿತ್ರಾಂಗದಾ (1936)

**ಕವನ ಸಂಕಲನಗಳು**

1. ಕೊಳಲು (1930)
2. ಪಾಂಚಜನ್ಯ (1933)
3. ನವಿಲು (1934)
4. ಕಲಾಸುಂದರಿ (1934)
5. ಕಥನ ಕವನಗಳು (1937)
6. ಕೋಗಿಲೆ ಮತ್ತು ಸೋವಿಯಟ್ ರಷ್ಯಾ (1944)
7. ಪ್ರೇಮ ಕಾಶ್ಮೀರ (1946)
8. ಅಗ್ನಿಹಂಸ (1946)
9. ಕೃತ್ತಿಕೆ (1946)
10. ಪಕ್ಷಿಕಾಶಿ (1946)
11. ಕಿಂಕಿಣಿ (ವಚನ ಸಂಕಲನ) (1946)
12. ಷೋಡಶಿ (1946)
13. ಚಂದ್ರಮಂಚಕೆ ಬಾ ಚಕೋರಿ (1957)
14. ಇಕ್ಷುಗಂಗೋತ್ರಿ (1957)
15. ಅನಿಕೇತನ (1963)
16. ಜೇನಾಗುವ (1964)
17. ಅನುತ್ತರಾ (1965)
18. ಮಂತ್ರಾಕ್ಷತೆ (1966)
19. ಕದರಡಕೆ (1967)
20. ಪ್ರೇತಕ್ಯೂ (1967)
21. ಕುಟೀಚಕ (1967)
22. ಹೊನ್ನ ಹೊತ್ತಾರೆ (1976)
23. ಕೊನೆಯ ತೆನೆ ಮತ್ತು ವಿಶ್ವಮಾನವ ಸಂದೇಶ (1981)

**ಕಥಾ ಸಂಕಲನ**

1. ಸಂನ್ಯಾಸಿ ಮತ್ತು ಇತರ ಕಥೆಗಳು (1936)
2. ನನ್ನ ದೇವರು ಮತ್ತು ಇತರ ಕಥೆಗಳು (1940)

**ಕಾದಂಬರಿಗಳು**

1. ಕಾನೂರು ಹೆಗ್ಗಡತಿ (1936)
2. ಮಲೆಗಳಲ್ಲಿ ಮದುಮಗಳು (1967)

**ನಾಟಕಗಳು**

1. ಯಮನ ಸೋಲು (1928)
2. ಜಲಗಾರ (1928)
3. ಬಿರುಗಾಳಿ (1930)
4. ವಾಲ್ಮೀಕಿಯ ಭಾಗ್ಯ (1931)
5. ಮಹಾರಾತ್ರಿ (1931)
6. ಸ್ಮಶಾನ ಕುರುಕ್ಷೇತ್ರಂ (1931)
7. ರಕ್ತಾಕ್ಷಿ (1933)
8. ಶೂದ್ರ ತಪಸ್ವಿ (1944)
9. ಬೆರಳ್‌ಗೆ ಕೊರಳ್ (1947)
10. ಬಲಿದಾನ (1948)
11. ಚಂದ್ರಹಾಸ (1963)
12. ಕಾನೀನ (1974)

**ಪ್ರಬಂಧ**

1. ಮಲೆನಾಡಿನ ಚಿತ್ರಗಳು (1933)

**ವಿಮರ್ಶೆ**

1. ಕಾವ್ಯವಿಹಾರ (1946)
2. ತಪೋನಂದನ (1950)
3. ವಿಭೂತಿಪೂಜೆ (1953)
4. ದ್ರೌಪದಿಯ ಶ್ರೀಮುಡಿ (1960)
5. ರಸೋ ವೈ ಸಃ (1963)
6. ಇತ್ಯಾದಿ (1970)

**ಆತ್ಮಕಥೆ**

1. ನೆನಪಿನ ದೋಣಿಯಲ್ಲಿ: ಕುವೆಂಪು ಮದುವೆ ಪ್ರಸಂಗ

**ಜೀವನ ಚರಿತ್ರೆಗಳು**

1. ಸ್ವಾಮಿ ವಿವೇಕಾನಂದ
2. ರಾಮಕೃಷ್ಣ ಪರಮಹಂಸ

**ಅನುವಾದ**

1. ಗುರುವಿನೊಡನೆ ದೇವರಡಿಗೆ (ಭಾಗ 1, 2) (1954)
2. ಕೊಲಂಬೋ ಇಂದ ಆಲ್ಮೋರಕೆ

**ಭಾಷಣ-ಲೇಖನ**

1. ಸಾಹಿತ್ಯ ಪ್ರಚಾರ (1930)
2. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ (1944)
3. ಷಷ್ಠಿನಮನ (1964)
4. ಮನುಜಮತ-ವಿಶ್ವಪಥ (1971)
5. ವಿಚಾರ ಕ್ರಾಂತಿಗೆ ಆಹ್ವಾನ (1976)

**ಶಿಶು ಸಾಹಿತ್ಯ**

1. ಅಮಲನ ಕಥೆ (1924)
2. ಮೋಡಣ್ಣನ ತಮ್ಮ (ನಾಟಕ) (1926)
3. ಹಾಳೂರು (1926)
4. ಬೊಮ್ಮನಹಳ್ಳಿಯ ಕಿಂದರಿಜೋಗಿ (1928)
5. ನನ್ನ ಗೋಪಾಲ (ನಾಟಕ) (1930)
6. ನನ್ನ ಮನೆ (1946)
7. ಮೇಘಪುರ (1947)
8. ಮರಿವಿಜ್ಞಾನಿ (1947)
9. ನರಿಗಳಿಗೇಕೆ ಕೋಡಿಲ್ಲ (1977)

**ಇತರೆ**

1. ಜನಪ್ರಿಯ ವಾಲ್ಮೀಕಿ ರಾಮಾಯಣ

**ಆಯ್ದ ಸಂಕಲನಗಳು**

1. ಕನ್ನಡ ಡಿಂಡಿಮ (1968)
2. ಕಬ್ಬಿಗನ ಕೈಬುಟ್ಟಿ (1973)

3. ಪ್ರಾರ್ಥನಾ ಗೀತಾಂಜಲಿ (1972)

## ನಿಧನ

ಕುವೆಂಪು ಅವರು ನವೆಂಬರ್ 11, 1994ರಂದು ಮೈಸೂರಿನಲ್ಲಿ ನಿಧನರಾದರು. ತಮ್ಮ ಹುಟ್ಟೂರಾದ ಕುಪ್ಪಳಿಯಲ್ಲಿ ಅವರ ಅಂತ್ಯಸಂಸ್ಕಾರವನ್ನು ನೆರವೇರಿಸಲಾಯಿತು. ಕುಪ್ಪಳಿಯಲ್ಲಿರುವ ಅವರ ಸಮಾಧಿ ಒಂದು ಸ್ಮಾರಕವಾಗಿದೆ.

## ನುಡಿ ನಮನ:-

### ಜ್ಞಾನಪೀಠ ಪ್ರಶಸ್ತಿ ಉಲ್ಲೇಖ:-

ಕುವೆಂಪು ಅವರು ಸಾಹಿತ್ಯ ಬೃಹನ್ಮೂರ್ತಿ; ಕಾವ್ಯಮೀಮಾಂಸೆಯ ಯಾವೊಂದು ಸರಳ ಸೂತ್ರವೂ ಅವರನ್ನು ಸಂಪೂರ್ಣವಾಗಿ ವಿವರಿಸಲಾರದು - ಏಕೆಂದರೆ, ಅವರ ಕೃತಿಗಳು ನಗ್ನ ಸತ್ಯವನೆಂತೊ ಅಂತೇ ಅತೀತ ಸತ್ಯವನ್ನೂ ಅನಾವರಣಗೊಳಿಸುತ್ತವೆ. ಸೃಜನಾತ್ಮಕ ಜೀವನಚರಿತ್ರೆ, ಸಾಹಿತ್ಯ ವಿಮರ್ಶೆ, ಕಾವ್ಯಮೀಮಾಂಸೆ, ನಾಟಕ ಮತ್ತು ಕತೆ ಕಾದಂಬರಿಯ ಕ್ಷೇತ್ರಗಳಿಗೆ ಪುಟ್ಟಪ್ಪನವರ ಕೊಡುಗೆ ಸ್ಮರಣೀಯವಾದುದು. ಅವರದು ವ್ಯಷ್ಠಿ ವಾಣಿಯಲ್ಲ; ಯುಗಧರ್ಮ, ಜನಾಂಗ ಧರ್ಮಗಳ ವಾಣಿ. ಅವರು ಬಹುಕಾಲ ತಮ್ಮ ಸಾಹಿತ್ಯದ ಮೂಲಕ ಚಿರಂಜೀವಿಯಾಗಿಇರುತ್ತಾರೆ.

### ಬಿ.ಎಂ.ಶ್ರೀ.

ನೂರು ದೋಷಗಳಿದ್ದರೂ ಕಾವ್ಯವು ಕಾವ್ಯವೇ, ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ, ಪುಟ್ಟಪ್ಪನವರ ಉತ್ತಮ ಕವನಗಳಲ್ಲಿ ಈ ಜೀವವಿದೆ; ಇರುವುದರಿಂದಲೇ ಅವುಗಳಲ್ಲಿಅಮೃತತತ್ವದಸಾರವಿದೆ.

### ದ.ರಾ.ಬೇಂದ್ರೆ

ಯುಗದ ಕವಿಗೆ

ಜಗದ ಕವಿಗೆ
ಶ್ರೀ ರಾಮಾಯಣ ದರ್ಶನದಿಂದಲೇ ಕೈ
ಮುಗಿದ ಕವಿಗೆ – ಮಣಿಯದವರು ಯಾರು?
ರಾಮಕೃಷ್ಣ ವಚನೋದಿತ ಪ್ರತಿಭೆ ತೆರೆದ
ಕವನ ತತಿಗೆ ತಣಿಯದವರು ಆರು?
ಮಲೆನಾಡಿನ ಸೌಂದರ್ಯಕೆ ಕುಣಿದಾಡಿದ
ಕವಿಯ ಜತೆಗೆ ಕುಣಿಯದವರು ಆರು?

ಕನ್ನಡಿಸಲಿ ಶಿವ ಜೀವನ
ಮುನ್ನಡೆಸಲಿ ಯುವ-ಜನ-ಮನ
ಇದೆ ಪ್ರಾರ್ಥನೆ ನಮಗೆ
ತಮವೆಲ್ಲಿದೆ ರವಿಯಿದಿರಿಗೆ?
ಉತ್ತಮ ಕವಿ ನುಡಿ – ಚದುರಗೆ
ಚಾರುತ್ವದ ಕುಂದಣದಲಿ
ಚಾರಿತ್ರ್ಯದ ರತ್ನ
ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೆ ತೃಪ್ತಿಯು ನಿಮಗೆ

**ಸ.ಸ.ಮಾಳವಾಡ**

ಹೊಸಗನ್ನಡ ಸಾಹಿತ್ಯವನ್ನು ಹಲವಂದದಲಿ ಸಿರಿವಂತಗೊಳಿಸಿದ ಧೀಮಂತ ಸಾಹಿತಿ ಕುವೆಂಪು. ಅವರು ಸಾಹಿತ್ಯ ಸೃಷ್ಟಿಯಲ್ಲಿ ಲೌಕಿಕ ಬಾಳಿನಲ್ಲಿ ಉನ್ನತ ಸ್ಥಾನ ಪಡೆದವರಾಗಿದ್ದಾರೆ. ಅವರು ಏಕಾಂತ ಜೀವಿ, ಧ್ಯಾನಶೀಲರು, ಭಾವಸಮಾಧಿಯಲ್ಲಿ ವಿರಮಿಸುವವರು. ಆದರೆ ಕನ್ನಡ ನಾಡು ನುಡಿಗಳ ಹಿತರಕ್ಷಣೆಗಾಗಿ ಸತತವೂ ಹೋರಾಟದಲ್ಲಿ ತೊಡಗಿದವರು. ಜನಸಂಪರ್ಕದಿಂದ ದೂರವುಳಿದರೂ ಜನ ಹಿತಕಾರ್ಯದಿಂದ ವಿಮುಖರಾಗಿಲ್ಲ. ಸನಿಹದಲ್ಲಿ ಅವರನ್ನು ಕಂಡಾಗ ಅವರು ಸ್ನೇಹಪರರು, ಕುಟುಂಬವತ್ಸಲರು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

**ಡಿ.ಎಲ್.ನರಸಿಂಹಾಚಾರ್**

ಪುಟ್ಟಪ್ಪನವರಂತೆ ಕಾವ್ಯವನ್ನು ಯಾರು ಬರೆಯಬಲ್ಲರು? ಅವರ ಕಾವ್ಯದಲ್ಲಿ ಕಾಣುವ ಮೃದು ಮಧುರ ಪದಬಂಧ, ಬಗೆಯ ಭಾವದ ಐಸಿರಿ, ಭಾವದ ರಸಪ್ರವಾಹ, ಕಾವ್ಯಾಲಂಕಾರ, ಉಕ್ತಿ ಚಮತ್ಕಾರಗಳ ವೈಭವವು ಸಹೃದಯರನ್ನು ರೋಮಾಂಚನಗೊಳಿಸಿ ಸಂತೋಷದ ಕಣ್ಣೀರನ್ನು ಕೋಡಿವರಿಸುತ್ತದೆ. ಪಾಶ್ಚಿಮಾತ್ಯ ಕಾವ್ಯ ವಿಮರ್ಶಕ ಮಾನದಂಡದಿಂದ ಅಳೆದು ನೋಡಿದರೂ ಪುಟ್ಟಪ್ಪನವರು ಮಹಾಕವಿಗಳಾಗಿತೇರ್ಗಡೆಹೊಂದುತ್ತಾರೆ.

**ಹಾ.ಮಾ.ನಾಯಕ**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರ ಮಾಂತ್ರಿಕ ಲೇಖನಿ ಅಲಂಕರಿಸದ ಸಾಹಿತ್ಯ ಪ್ರಕಾರವಿಲ್ಲ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ ಬಗೆಯಾದ ಯಶಸ್ಸನ್ನು ಗಳಿಸಿದ ಲೇಖಕರು ಯಾವುದೇ ಭಾಷೆಯಲ್ಲಾದರೂ ಹೆಚ್ಚಾಗಿ ಸಿಕ್ಕುವುದಿಲ್ಲ. ಆ ಬಗೆಯ ವಿರಳರ ಪಂಕ್ತಿಯಲ್ಲಿ ಕನ್ನಡದ ಕುವೆಂಪು ಒಬ್ಬರೆನ್ನುವುದು ಅಭಿಮಾನದ ಸಂಗತಿ.

**ಸುಜನಾ**

ಶ್ರೀ ಕುವೆಂಪು ದರ್ಶನದ ವೈಶಿಷ್ಟ್ಯ ಪರಂಪರೆ-ಯುಗ ಪ್ರಜ್ಞೆಗಳೆರಡರ ಸಮನ್ವಯದಿಂದ ಬಂದದ್ದು. ಈ ಅತಿಶಯ ಸಿದ್ದಿ ಸಾಹಿತ್ಯಲೋಕದಲ್ಲಿ ವಿರಳ.

**ಜಿ.ಎಸ್.ಶಿವರುದ್ರಪ್ಪ**

ಕುವೆಂಪು ಅವರು ಮೂಲತಃ ಕ್ರಾಂತಿಕವಿ. ಸಾಮಾಜಿಕ ಅನ್ಯಾಯಗಳ ಬಗ್ಗೆ ಮೊದಲಿನಿಂದಲೂ ಇವರಷ್ಟು ನಿರ್ಭಯವಾಗಿ ಪ್ರತಿಭಟಿಸಿದ ಕನ್ನಡ ಕವಿ ಲೇಖಕರು ಇಲ್ಲವೇ ಇಲ್ಲ ಎಂದರೂ ಸಲ್ಲುತ್ತದೆ. ಉಚ್ಚ ವರ್ಣದ ಸಮಸ್ತ ಬೌದ್ದಿಕ ಉಪಕರಣಗಳನ್ನು ಕೈವಶ ಮಾಡಿಕೊಂಡು, ಅವುಗಳನ್ನು ಉಪಯೋಗಿಸಿ ಉಚ್ಚವರ್ಣದ ಮೇಲೆ ಧಾಳಿ ಮಾಡಿದ್ದು, ಮತ್ತು ಅಪ್ರತಿಷ್ಠಿತ ವರ್ಗಕ್ಕೆ ಆತ್ಮಗೌರವನ್ನೂ, ಕೆಚ್ಚನ್ನೂ ತುಂಬುವುದರ ಜತೆಗೆ ಉಚ್ಚ ವರ್ಗದವರೊಂದಿಗೆ ಸಮಸ್ಪರ್ಧಿಯಾಗಿ ನಿಂತದ್ದು ಕುವೆಂಪು ಅವರ ಸಾಹಿತ್ಯಕ ಧೋರಣೆಯ ವಿಶೇಷತೆಯಾಗಿದೆ.

**ದೇ.ಜ.ಗೌ**

ಐದು ದಶಕಗಳಿಂದ ಶ್ರೀ ಕುವೆಂಪು ಸಾಹಿತ್ಯ ಕನ್ನಡ ನಾಡಿನ ಜನಮನವನ್ನು ತಣಿಸುತ್ತಾ, ಹುರಿದುಂಬಿಸುತ್ತಾ, ಹಸನುಗೊಳಿಸುತ್ತಿದೆ, ಅವರ ವಿಚಾರಶಕ್ತಿಯನ್ನು ಕೆರಳಿಸುತ್ತಾ, ನಿರಂಕುಶ ಮತಿತ್ವದ ಅವಶ್ಯಕತೆ, ಅನಿವಾರ್ಯತೆಯನ್ನು ನೆನಪಿಗೆ ತಂದುಕೊಡುತ್ತಿದೆ, ಅವರ ಬದುಕಿಗೊಂದು ತಾರಕಮಂತ್ರವಾಗಿ ಧ್ರುವತಾರೆಯಾಗಿ ಸಂಜೀವನಶಕ್ತಿಯಾಗಿ ಅದನ್ನು ತಿದ್ದುತ್ತಿದೆ, ಉನ್ನತಗೊಳಿಸುತ್ತಿದೆ, ಸಚೇತನಗೊಳಿಸುತ್ತಿದೆ, ಪುಷ್ಟಿಗೊಳಿಸುತ್ತಿದೆ. ಸಾವಿರಾರು ವರ್ಷಗಳಿಂದ ಭಾರತೀಯ ಧರ್ಮದ ಸುತ್ತ ಬೆಳೆದುಕೊಂಡು, ಅದರ ಮೂಲ ಸ್ವರೂಪವನ್ನು ಮರೆಸಿರುವ ಮೌಢ್ಯಗಳಿಗೆ ಶುಷ್ಕ ಚಾರಗಳಿಗೆ ಕಂದಾಚಾರದ ಸಂಪ್ರದಾಯಗಳಿಗೆ ಅಗ್ನಿ ಸಂಸ್ಕಾರ ಮಾಡುವಲ್ಲಿ, ಜಾತೀಯತೆಯನ್ನು ಸಾಧ್ಯವಾದಷ್ಟು ತೊಡೆಯುವಲ್ಲಿ, ಪುರೋಹಿತ ಹಾಗೂ ಸಾಮ್ರಾಜ್ಯಶಾಹಿಯನ್ನು ಅಂತ್ಯಗೊಳಿಸುವಲ್ಲಿ ಅದು ಯಶಸ್ವಿಯಾಗಿದೆ. ಭಾರತೀಯರ ಸುಖ ದುಃಖ, ಆಶೆ ಆಕಾಂಕ್ಷೆ, ಕನಸು ನನಸು ಗಳನ್ನು ಪ್ರತಿಬಿಂಬಿಸುವ ಮೂಲಕಅವರನಾಡಿಯನ್ನುಮಿಡಿದಿದೆ.

**ಕೀರ್ತಿನಾಥ ಕುರ್ತಕೋಟಿ**

ಕುವೆಂಪು ಈ ತಲೆಮಾರಿನ ಹಿರಿಯ ಕವಿಗಳಲ್ಲೊಬ್ಬರಾಗಿದ್ದಾರೆ. ರಚನಾ ಕ್ರಮದಲ್ಲಿ ದೋಷಗಳನ್ನು ತೋರಿಸಬಹುದಾದರೂ ಅವರ ಕಾವ್ಯಶಕ್ತಿ ಸಹಜವಾದದ್ದು. ಅದು ಮುಖ್ಯವಾಗಿ 'ರೊಮ್ಯಾಂಟಿಕ್' ಜಾತಿಯ ಪ್ರತಿಭೆಯಾಗಿದ್ದರಿಂದ ಭಾವಾವೇಶ ಅಲ್ಲಿ ಅನಿವಾರ್ಯವಾಗುತ್ತದೆ. ಆದರೆ ಕುವೆಂಪು ರವರ ಕಾವ್ಯದ ಶ್ರೇಷ್ಠತೆಯಿರುವುದು ಅದು ಸಮಕಾಲೀನ ಜೀವನದ ಎಲ್ಲ

ಅಂಶಗಳಿಗೂ ಪ್ರತಿಸ್ಪರ್ಧಿಯಾಯಿತೆಂಬುದೇ. ನಿಸರ್ಗದ ಚೆಲುವು, ದೇಶ ಪ್ರೇಮ, ಆದರ್ಶಪ್ರಿಯತೆ, ಕ್ರಾಂತಿಯ ವೀರಭಾವ, ಆಧ್ಯಾತ್ಮಿಕತೆ ಮೊದಲಾದ ಎಲ್ಲ ವಿಷಯಗಳಿಗೂ ಅವರ ಕಾವ್ಯ ಇಂಬುಕೊಟ್ಟಿದೆ. ಹೀಗಾಗಿ ಹೊಸಗನ್ನಡ ಕಾವ್ಯದ ಇತಿಹಾಸದಲ್ಲಿ ಅವರ ಸ್ಥಾನ ಭದ್ರವಾಗಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

### ಕೋ.ಚೆನ್ನಬಸಪ್ಪ

ಮೊದಲಿನಿಂದಲೂ ಪುಟ್ಟಪ್ಪನವರ ಪ್ರಮುಖ ಪ್ರವೃತ್ತಿ, ಪ್ರಥಮ ಆಸಕ್ತಿ ಅಧ್ಯಾತ್ಮ. ಅವರು ಜನ್ಮ ತಾಳಿದ್ದು ಇತರ ಕೋಟ್ಯಂತರ ಜನರಂತೆ ಸುಮ್ಮನೆ ಬದುಕಿ, ಬಾಳಿ ಹೋಗಲಿಕ್ಕಲ್ಲ ಎಂಬ ಆತ್ಮ ಪ್ರತ್ಯಯ - ಆತ್ಮಜ್ಞಾನ - ಪುಟ್ಟಪ್ಪನವರಿಗೆ ಚಿಕ್ಕಂದಿನಿಂದಲೇ ಉಂಟಾಗಿತ್ತು. ಆದ್ದರಿಂದ ಮಾನವ ಜನ್ಮೋದ್ದೇಶವಾದ ಆತ್ಮಸಾಕ್ಷಾತ್ಕಾರವೇ ಅವರ ಬಾಳ ಗುರಿ; ಜೀವನೋದ್ದೇಶದ ಆದಿ ಅಂತ್ಯ. ಅವರಿಗೆ ಜೀವನದಲ್ಲಿ ಮತ್ತಾವ ಉಪಾಧಿಗಳೂ ಇರಲಿಲ್ಲ. ಇಂಥ ಅವರ ಜೀವನೋದ್ದೇಶಕ್ಕೆ ನೆರವಾದುದು ಅವರ ಕಾವ್ಯಶಕ್ತಿ. ಅದನ್ನವರು ಎಂದೂ ಮರೆಮಾಚಿಲ್ಲ. ಆದರೂ ಕನ್ನಡ, ಕರ್ನಾಟಕ ಅವರ ಜೀವದ ಎರಡು ಶ್ವಾಸಕೋಶಗಳು. ಆ ಶ್ವಾಸಕೋಶಗಳ ಚಲನೆ ನಿಂತರೆ ಅವರ ಬಾಳುಸಿರೇ ನಿಂತಂತೆ.

### ಕೆ. ಸಚ್ಚಿದಾನಂದನ್

ಕುವೆಂಪು ಕೇವಲ ಕರ್ನಾಟಕದವರಲ್ಲ, ಭಾರತದ ಮಹಾ ಲೇಖಕ. ಅವರ 'ರಾಮಾಯಣ ದರ್ಶನಂ' ಆಧುನಿಕ ಭಾರತೀಯ ಸಾಹಿತ್ಯದ ಶ್ರೇಷ್ಠ ಕೃತಿ. ಇಲ್ಲಿ ಬರುವ ರಾಮ, ಸೀತೆ ಯೊಂದಿಗೆ ಅಗ್ನಿ ಪ್ರವೇಶ ಮಾಡುತ್ತಾನೆ. ಎಲ್ಲೆಡೆ ಮಹಿಳೆಯ ಮೇಲೆ ದೌರ್ಜನ್ಯ, ಹಿಂಸೆಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ ಕುವೆಂಪು ಕಟ್ಟಿಕೊಟ್ಟ ಈ ಚಿತ್ರಣ ಪ್ರಸ್ತುತ ಮತ್ತು ಆದರ್ಶ. ಅವರ ಶೂದ್ರ ತಪಸ್ವಿ ನಾಟಕ, ಶೋಷಣೆ ಮತ್ತು ತಾರತಮ್ಯದ ವರ್ಣ ನೀತಿಗೆ ಮುಖಾಮುಖಿಯಾದ ನಾಟಕ. ಸಾರ್ವಕಾಲಿಕ ಕಾವ್ಯ ಮೀಮಾಂಸೆಯ ಅಧ್ವರ್ಯುಗಳಲ್ಲಿ ಕುವೆಂಪು ಒಬ್ಬರು. ತಾವು ನಂಬಿದ ಕಾವ್ಯ ತತ್ವವನ್ನು ತಮ್ಮ 'ರಸೋ ವೈ ಸಃ'ದಲ್ಲಿ ಹೇಳಿದ್ದಾರೆ. ಕನ್ನಡಕ್ಕೆ ಹೊಸ ನುಡಿಗಟ್ಟು ಮತ್ತು ಹೊಸ ಕಲ್ಪನೆಗಳನ್ನು ನೀಡಿದವರು. ಕಲ್ಪನಾಶಕ್ತಿಯೊಂದಿಗೆ, ಬೌದ್ಧಿಕ ಸಾಮರ್ಥ್ಯವನ್ನು ಮೇಳೈಸಿ, ನೈತಿಕ ಮತ್ತು ಸೌಂದರ್ಯ ಮೀಮಾಂಸೆಯನ್ನು ಉನ್ನತ ಸ್ಥಾನಕ್ಕೆ ಒಯ್ದವರು.

## ಕುವೆಂಪು ಕುರಿತ ಕೃತಿಗಳು

1. ಮಗಳು ಕಂಡ ಕುವೆಂಪು - ಲೇ: ತಾರಿಣಿ ಚಿದಾನಂದ ಪ್ರಕಾಶಕರು:ಪುಸ್ತಕ ಪ್ರಕಾಶನ
2. ಅಣ್ಣನ ನೆನಪು - ಲೇ: ಕೆ ಪಿ ಪೂರ್ಣಚಂದ್ರ ತೇಜಸ್ವಿ ಪ್ರಕಾಶಕರು:ಪುಸ್ತಕ ಪ್ರಕಾಶನ
3. ಕುವೆಂಪು - ಲೇ: ದೇಜಗೌ
4. ಯುಗದ ಕವಿ - ಲೇ: ಡಾ.ಕೆ.ಸಿ.ಶಿವಾರೆಡ್ಡಿ

5. ಹೀಗಿದ್ದರು ಕುವೆಂಪು - ಲೇ: ಪ್ರಭುಶಂಕರ
6. ಕುವೆಂಪು - ಲೇ: ಎಸ್.ವಿ.ಪರಮೇಶ್ವರಭಟ್ಟ
7. ಶ್ರೀ ಕುವೆಂಪು ಸಂಭಾಷಣೆ ಮತ್ತು ಸಂದರ್ಶನ - ಲೇ: ಎಸ್.ವೃಷಭೇಂದ್ರಸ್ವಾಮಿ
8. ತರಗತಿಗಳಲ್ಲಿ ಕುವೆಂಪು - ಲೇ: ಎಸ್.ವೃಷಭೇಂದ್ರಸ್ವಾಮಿ
9. ಕುವೆಂಪು ಕಾವ್ಯಯಾನ - ಲೇ: ಬಿ.ಆರ್. ಸತ್ಯನಾರಾಯಣ
10. ಕುವೆಂಪು ನುಡಿತೋರಣ - ಸಂ: ಬಿ.ಆರ್.ಸತ್ಯನಾರಾಯಣ

## ನಾಟಕ-ಚಲನಚಿತ್ರ-ಧಾರಾವಾಹಿ

"ಬೆರಳ್‌ಗೆ ಕೊರಳ್" ನಾಟಕವು ಚಲನಚಿತ್ರವಾಗಿದೆ.

"ಕಾನೂರು ಹೆಗ್ಗಡಿತಿ" ಕಾದಂಬರಿ ಚಲನಚಿತ್ರವಾಗಿದೆ.

"ಮಲೆಗಳಲ್ಲಿ ಮದುಮಗಳು" ಕಾದಂಬರಿ ಧಾರಾವಾಹಿಯಾಗಿದೆ ಹಾಗೂ ೯ ಗಂಟೆಗಳ ಅವಧಿಯ ನಾಟಕವಾಗಿಯೂ ಮೈಸೂರಿನ ರಂಗಾಯಣದಲ್ಲಿ ಮತ್ತು ಬೆಂಗಳೂರಿನ ಕಲಾಗ್ರಾಮದಲ್ಲಿ ಪ್ರದರ್ಶನಗೊಂಡಿದೆ.

## ಕೊಡುಗೆ

1. ಕುವೆಂಪು ಅವರು ಯುಗಪ್ರವರ್ತಕ ಕವಿ.
2. ಕುವೆಂಪು ಅವರು 'ಶ್ರೀ ರಾಮಾಯಣ ದರ್ಶನಂ' ರಚಿಸುವ ಮೂಲಕ ಆಧುನಿಕ ಕಾಲದಲ್ಲಿ ಮಹಾಕಾವ್ಯ ರಚನೆಗೆ ನಾಂದಿ ಹಾಡಿದರು.
3. ಕುವೆಂಪು ಅವರು ತಮ್ಮ ಮೇರು ಕೃತಿ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಹೊಸ ಕಾಲಕ್ಕೆ ಅಗತ್ಯವೆನ್ನಿಸಿದ ದರ್ಶನವನ್ನು ಕಟ್ಟಿಕೊಟ್ಟಿದ್ದಾರೆ.
4. ಕುವೆಂಪು ಅವರು ವಿಶ್ವಮಾನವ ಸಂದೇಶ ನೀಡಿದ್ದಾರೆ.
5. ಕುವೆಂಪು ಅವರು ಮಂತ್ರಮಾಂಗಲ್ಯ ಎಂಬ ಸರಳ ವಿವಾಹ ಪದ್ಧತಿಯನ್ನು ರೂಢಿಗೆ ತಂದರು.
6. ಕುವೆಂಪು ಅವರು ತಮ್ಮ ಕನಸಿನ ಕೂಸಾದ ಮಾನಸ ಗಂಗೋತ್ರಿಯನ್ನು ಕಟ್ಟಿ ಬೆಳೆಸಿದ್ದಾರೆ.
7. ಕುವೆಂಪು ಅವರು ದಲಿತ ಹಾಗೂ ಬಂಡಾಯ ಚಳವಳಿಗಳಿಗೆ ಸ್ಫೂರ್ತಿಯಾಗಿದ್ದಾರೆ.
8. 1985ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನವನ್ನು ಉದ್ಘಾಟಿಸಿದರು.

## ಗೌರವ/ ಪ್ರಶಸ್ತಿ ಪುರಸ್ಕಾರಗಳು

1. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ - (ಶ್ರೀರಾಮಾಯಣ ದರ್ಶನಂ) (1955)
2. ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಿ.ಲಿಟ್. (1956)
3. ಪದ್ಮಭೂಷಣ (೧೯೫೮)

4. **ರಾಷ್ಟ್ರಕವಿ** ಪುರಸ್ಕಾರ (೧೯೬೪)
5. ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (೧೯೬೬)
6. ಜ್ಞಾನಪೀಠ ಪ್ರಶಸ್ತಿ (ಶ್ರೀ ರಾಮಾಯಣ ದರ್ಶನಂ) (೧೯೬೮)
7. ಬೆಂಗಳೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್. (೧೯೬೯)
8. ಕೇಂದ್ರ ಸಾಹಿತ್ಯ ಅಕಾಡೆಮಿಯು ಫೆಲೋಷಿಪ್ (1979)
9. ಪಂಪ ಪ್ರಶಸ್ತಿ (೧೯೮೮)
10. ಪದ್ಮವಿಭೂಷಣ (೧೯೮೯)
11. ಕರ್ನಾಟಕ ರತ್ನ (೧೯೯೨)
12. ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ
13. ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ (ಮರಣೋತ್ತರ)
14. ಕುವೆಂಪು ಅವರ 113 ನೇ ಜನ್ಮ ದಿನದಂದು, ಗೂಗಲ್ ಇಂಡಿಯಾ ಅವರ ಗೌರವಾರ್ಥ ಡೂಡಲ್ ಪ್ರದರ್ಶಿಸಿತು.(2017 ಡಿಸೆಂಬರ್ 29) [೧]

## ಅಧ್ಯಕ್ಷತೆ, ಇತ್ಯಾದಿ

1. 1928ರಲ್ಲಿ ಸೆಂಟ್ರಲ್ ಕಾಲೇಜು ಕರ್ಣಾಟಕ ಸಂಘದ ಆಶ್ರಯದಲ್ಲಿ ನಡೆದ ವಿದ್ಯಾರ್ಥಿ ಕವಿ ಸಮ್ಮೇಳನದ ಅಧ್ಯಕ್ಷರಾಗಿದ್ದರು.
2. ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷರಾಗಿದ್ದರು.
3. 1957ರಲ್ಲಿ ನಡೆದ 39ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

## ವಿಶ್ವ ಮಾನವ ದಿನ

ಕರ್ನಾಟಕ ಸರ್ಕಾರವು ೨೦೧೫ರ ಡಿಸೆಂಬರ್‌ನಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ ೨೯ ಅನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸುವುದಾಗಿ ಆದೇಶ ಹೊರಡಿಸಿತು. ಈ ಮೂಲಕ ವಿಶ್ವಮಾನವ ಸಂದೇಶ ಸಾರಿದ ಕವಿಗೆ ಮತ್ತೊಂದು ಗೌರವ ಸಂದಾಯವಾದಂತಾಯ್ತು.

## ಸ್ಮಾರಕಗಳು:-



ಕವಿಮನೆ, ಕುಪ್ಪಳಿ. ಈಗ ವಸ್ತು ಸಂಗ್ರಹಾಲಯವಾಗಿದೆ.



ಕವಿಮನೆ ದಾರಿ ಸೂಚಿ

ಕುಪ್ಪಳಿಯಲ್ಲಿರುವ ಕುವೆಂಪು ಅವರು ಹುಟ್ಟಿದ ಮನೆ ವಸ್ತು ಸಂಗ್ರಹಾಲಯವಾಗಿದೆ.

ಅಲ್ಲೇ ಇರುವ ಅವರ ಸಮಾಧಿ ಸ್ಥಳವಾದ 'ಕವಿಶೈಲ' ಒಂದು ವಿಶಿಷ್ಟ ಸ್ಮಾರಕ.

ಶಿವಮೊಗ್ಗದ ಬಳಿ ಇರುವ ವಿಶ್ವವಿದ್ಯಾಲಯಕ್ಕೆ ಕುವೆಂಪು ಅವರ ಹೆಸರಿಡಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ಕನ್ನಡ ಅಧ್ಯಯನ ಸಂಸ್ಥೆಗೆ ಕುವೆಂಪು ಅವರ ಹೆಸರಿಡಲಾಗಿದೆ.

ಅನುವಾದ ಕಾರ್ಯವನ್ನು ಪ್ರೋತ್ಸಾಹಿಸಲು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿರುವ ಭಾಷಾ ಭಾರತಿ ಸಂಸ್ಥೆಗೆ ಕುವೆಂಪು ಅವರ ಹೆಸರಿಡಲಾಗಿದೆ.

ಮೈಸೂರಿನ ಕುವೆಂಪು ನಗರದಲ್ಲಿರುವ ರಸ್ತೆಗಳಿಗೆ ಕುವೆಂಪು ಅವರ ಪರಿಕಲ್ಪನೆಗಳ, ಪಾತ್ರಗಳ ಹೆಸರುಗಳನ್ನು ಇಡಲಾಗಿದೆ.

**ಉಪಸಂಹಾರ :-**

ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ನವೆಂಬರ್ 11 ರಂದು 1994 ರಲ್ಲಿ ನಿಧನರಾದರು. ಅವರು ಭಾರತೀಯ ಜನರಿಗಾಗಿ ಅನೇಕ ಮಹಾನ್ ಕಾದಂಬರಿಗಳು ಮತ್ತು ನಾಟಕಗಳನ್ನು ಬರೆದರು. ಮತ್ತು ಅವರು ವಾಸಿಸುತ್ತಿದ್ದ ಅವರ ಮನೆಯನ್ನು ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಯಿತು ಮತ್ತು ಅದನ್ನು ಅವರಿಗೆ ಸಮರ್ಪಿಸಲಾಯಿತು. ಆದರೆ ಈ ವಸ್ತುಸಂಗ್ರಹಾಲಯದಲ್ಲಿ 2015 ರ ನವೆಂಬರ್ 23 ರಂದು ಕ್ಯಾಮೆರಾಗಳ ಹೆಚ್ಚಿನ ಭದ್ರತೆ ಇತ್ತು, ಕುವೆಂಪು ಪದ್ಮಶ್ರೀ ಮತ್ತು ಪದ್ಮಭೂಷಣ ಪ್ರಶಸ್ತಿಗಳನ್ನು ಕದಿಯಲಾಯಿತು, ಮತ್ತು ಇದರಿಂದಾಗಿ ಸರ್ಕಾರ ಮತ್ತು ಜನರು ಹೊಂದಿರುವ ವಿಶ್ವಾಸವೂ ನಾಶವಾಗಿದೆ. ಅವರು ಒಬ್ಬ ಮಹಾನ್ ಕಾದಂಬರಿಕಾರ, ಮತ್ತು ಅವರಂತಹ ಕವಿಯನ್ನು ಹೊಂದಿರುವುದು ಭಾರತೀಯ ಜನತೆಗೆ ಗೌರವ.

## ಆಕರ ಗ್ರಂಥಗಳು :-


1. ಕನ್ನಡ ಸಾಹಿತ್ಯ ಸಂಸಕೃತಿ ಕೋಶ    ಚಿ.ಸಿ ನಿಂಗಣ್ಣಾ
2. ಕನ್ನಡ ಸಾಹಿತ್ಯ ಕೋಶ    ರಾಜಪ್ಪಾ ದಳವಾಯಿ
3. ಕನ್ನಡ ಸಾಹಿತ್ಯ ಸಂಜೀವಿನಿ    ಶಿವಶರಣಪ್ಪಾ ಮೊತಕಪಳ್ಳಿ
4. ಕನ್ನಡ ಸಾಹಿತ್ಯ ಸಂಪಾದನೆ    ಶೇಖರ ಹೋಡೆನೂರ
5. ಅಂತರಜಾಲದ ಮಾಹಿತಿ


